ಕರ್ನಾಟಕ ವಿಧಾನ ಸಭೆ

ಶುಕ್ರವಾರ 14ನೇ ಫೆಬ್ರವರಿ 1997 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ 3.50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:- ಶ್ರೀ ರಮೇಶ್ ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

(ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲರೂ ಅಧ್ಯಕ್ಷರ ಪೀಠದೆದುರು ಧರಣಿ ಹೂಡಿದ್ದರು)

ಅಧ್ಯಕ್ಷರು:- ಈಗಾಗಲೇ ಸ್ವಲ್ಪ ಹೊತ್ತು ಕುಳಿತು ಮಾತುಕತೆಯಾಗಿರುವುದರಿಂದ, ಸನ್ಮಾನ್ಯ ಮುಖ್ಯಮಂತ್ರಿಗಳು, ನೀವು ಹೇಳಿರತಕ್ಕ ಕೆಲವು ವಿಚಾರಗಳಲ್ಲಿ ಒಲವು ಇರುವುದರಿಂದ, ಸರ್ಕಾರ ತಮ್ಮ ನಿಲುವನ್ನು ಪುನರ್ ಪರಿಶೀಲನೆ ಮಾಡುತ್ತದೆ.

ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಅವರು ಏನು ತೀರ್ಮಾನ ಮಾಡಿ ಕೊಂಡಿರುತ್ತಾರೆ ಅದನ್ನು ಅಪೀಲ್ ಮಾಡಿಕೊಳ್ಳುತ್ತಾರೆ. ಆಮೇಲೆ, ತಾವು ನಿರ್ಣಯ ತೆಗೆದುಕೊಳ್ಳಬಹುದು.

+ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಬಿ.ಜೆ.ಪಿ. ಮುಖಂಡರು, ಬೇರೆ ಪಕ್ಷಗಳ ಫ್ಲೋರ್ ಲೀಡರ್ಸ್ ಎಲ್ಲಾ ಕುಳಿತು ಚರ್ಚೆ ಮಾಡಿದ್ದೇವೆ. ಕೆ.ಇ.ಬಿ. ಇತ್ತೀಚೆಗೆ ಪ್ರಕಟಿಸಿದ ಆಜ್ಞೆಯ ಕೆಲವು ಭಾಗಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ತೀವ್ರವಾದ ಪ್ರತಿಭಟನೆ ಮಾಡಿದ್ದರು, ಮೊನ್ನೆ ಅವರ ಭಾಷಣದಲ್ಲಿ ಹೇಳಿದರು, ರೆಗ್ಯುಲರೈಷೇಷನ್ ಇದರ ಪ್ರಕ್ರಿಯೆ ಆರಂಭವಾದ ಮೇಲೆ ಅನ್ ಆಥರೈಸ್ಡ್ ಕನ್ಸ್ಯೂಮರ್ಸ್ ಇರಿಗೇಷನ್ ಪಂಪ್ ಸೆಟ್‌ಗಳನ್ನು ಹಾಕಿದ್ದಾರೆ, ಅಂಥವುಗಳನ್ನು ರೆಗ್ಯುಲರೈಷೇಷನ್ ಮಾಡುವುದಕ್ಕೆ ಒಂದು ಪಂಪ್‌ಸೆಟ್‌ಗೆ 10,000-00 ರೂ ಷೆಡ್ಯೂಲ್ ಕ್ಯಾಸ್ಟಿಗಾದರೆ 5,000-00 ರೂ. ಅದು ದಂಡ ಅಲ್ಲ; ರೆಗ್ಯುಲರೈಷೇಷನ್ ಫೀ ಎಂದು, ಆಮೇಲೆ, ಒಂದು ಹೆಚ್.ಪಿ.ಗೆ 300-00 ರೂ. ದಂಡ ಎಂದು ಅದು ಸಕಾರಣಗಳಿಂದ ಮಾಡಿದ್ದು. ರಾಜ್ಯದಲ್ಲಿ ಈಗಾಗಲೇ ಹತ್ತು ಲಕ್ಷ ಪಂಪ್‌ಸೆಟ್‌ಗಳು ಏನಿವೆ ಅವಕ್ಕೆ ವಿದ್ಯುತ್ ಒದಗಿಸಬೇಕೆಂದು ಲೀಸ್ಟ್ ಮಾಡಿ ಪ್ರಿಯಾರಿಟಿ ಮಾಡುತ್ತೇವೆ. ಅದರಲ್ಲಿ ಯಾರಿಗೆ ಮೊದಲು ಕೊಡಬೇಕು ಅದರ ಬಗ್ಗೆ ಎಲ್ಲಾ ವಿಚಾರ ಮಾಡುತ್ತೇವೆ. ಕೆಲವು ಕಡೆ ತಪ್ಪಾಗಿತ್ತು, ಕೆಲವು ಕಡೆ ಈ ರೀತಿ ರೈತರು ಒಬ್ಬರು ಇನ್ನೊಬ್ಬರಿಗೆ ಮೋಸ ಮಾಡಬಾರದು ಎಂಬ ಕಾರಣಕ್ಕೋಸ್ಕರ ಇದನ್ನು ಮಾಡಿದ್ದು. ಅದರ ಬಗ್ಗೆ ಇವತ್ತೆಲ್ಲಾ ಚರ್ಚೆಯಾಯಿತು. ಚರ್ಚೆಯಾದ ಮೇಲೆ, ನಾನು ಏನು ಹೇಳಿದೆ, ದುಡ್ಡಿನ ದೃಷ್ಟಿಯಿಂದ ಈ ಬಗ್ಗೆ ಒಂದು ಶಿಸ್ತು ತರಬೇಕು. 10 ಲಕ್ಷ ಪಂಪ್‌ಸೆಟ್‌ಗಳಲ್ಲಿ 10,000-00 ರೂ ಅಥವಾ 20,000-00 ಇರಬಹುದು. ಇನ್ನು ಇದೇ ರೀತಿ ಪ್ರವೃತ್ತಿ ಮುಂದುವರಿದರೆ, ಈಗ ತಮ್ಮದು ಲಿಸ್ಟ್ ಆಗಿ 20ನೇ ನಂಬರ್ ಇರುತ್ತದೆ. ನಿಮಗೆ ಮೊದಲು ಕನೆಕ್ಷನ್ ಕೊಡುವುದಕ್ಕೆ ಬದಲು, ಬೇರೆ ನಾವು ಸ್ಯಾಂಕ್ಷನ್ ಮಾಡಿ ಆರ್ಡರ್ ಇಷ್ಯು ಮಾಡಿ ಸ್ವಲ್ಪ ಮಟ್ಟಿಗೆ ಮೆಟೀರಿಯಲ್ಸ್ ಕೊಟ್ಟಾಗ, ತಮ್ಮದು ಅಲ್ಲಿ ನಿಲ್ಲುತ್ತದೆ. ಇನ್ಯಾರೋ ಇದ್ದಕ್ಕಿದ ಹಾಗೆ ಹೋಗಿ ಕಂಟ್ರಾಕ್ಟರ್ ಹಿಡಿದುಕೊಂಡು ಕನೆಕ್ಟ್ ಮಾಡಿಕೊಂಡು ಚಾಲು ಮಾಡುತ್ತಾನೆ. ಆಗ ಏನಾಗುತ್ತದೆ, ನಾನು ವೆಯಿಟ್ ಮಾಡಿದ್ದವನು, 20ನೆಯವನು ಇದ್ದೇನೆ,

30ನೆಯವನಿಗೆ ಕನೆಕ್ಷನ್ ಕೊಟ್ಟಿದ್ದಾರೆ ಎಂದು ಸಾಮಾನ್ಯವಾಗಿ ರೈತರಲ್ಲಿ ಕೆಟ್ಟ ಭಾವನೆ ಬರುತ್ತದೆ. ಇದನ್ನು ತಪ್ಪಿಸಬೇಕು ಎನ್ನುವ ಕಾರಣಕ್ಕೋಸ್ಕರ ಎಲ್ಲಿ ಅನ್ ಆಥರೈಸ್ಡ್ ಕನೆಕ್ಷನ್ ಇದೆ, ಅಲ್ಲೆಲ್ಲಾ ಅವರಿಗೆ ರೆಗ್ಯುಲರೈಸ್ ಮಾಡಬೇಕು. ಏಕೆಂದರೆ ಪವರನ್ನು ಯೂಸ್ ಮಾಡುತ್ತಲೇ ಇದ್ದಾರೆ. ಬೇರೆ ಆಲ್ಟರ್‌ನೇಟಿವ್ ಎಂದರೆ ಎಲ್ಲರದೂ ಡಿಸ್ ಕನೆಕ್ಟ್ ಮಾಡಿ ಅನ್ ಆಥರೈಸ್ಡ್ ಇರುವುದನ್ನು ಮತ್ತು ಅದು ಹೆಚ್ಚಿನ ಸಮಸ್ಯೆ ಕ್ರಿಯೇಟ್ ಮಾಡಬಹುದು. ಏಕೆಂದರೆ ತೋಟದವರು ಇರುತ್ತಾರೆ. ಸಣ್ಣಪುಟ್ಟ ತರಕಾರಿ ಬೆಳೆಯುವವರು ಇರುತ್ತಾರೆ. ಈ ದೃಷ್ಟಿಯಿಂದ ಮಾನ್ಯ ವಿರೋಧ ಪಕ್ಷದ ನಾಕಯರು ಮತ್ತು ಎಲ್ಲರೊಡನೆ ಮಾತನಾಡಿ ಈಗ ಅನ್ ಆಥರೈಸ್ಡ್ ಎಂದರೆ ಯಾರು? ಅದರ ಡೆಫನಿಷನನ್ನು ನಾವೆಲ್ಲಾ ಕುಳಿತು ಮಾತನಾಡಿ ಎಲ್ಲಿ ಅಪ್ಲಿಕೇಷನ್ ವಿತ್ ಡಿಪಾಸಿಟ್ ಅಮೌಂಟ್ ಹಾಕಿ ಅವನಿಗೆ ವರ್ಕ್ ಆರ್ಡರ್ ಆಗಿ...

ಅಧ್ಯಕ್ಷರು:- ನಾವು ಒಂದು ಕೆಲಸ ಮಾಡೋಣ. ಮಾನ್ಯ ಮುಖ್ಯ ಮಂತ್ರಿಗಳು ಎಕ್ಸ್‌ಪ್ಲೈನ್ ಮಾಡುತ್ತಿದ್ದಾರೆ. ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ತಾವು ನಿಂತುಕೊಂಡರೆ ಎಷ್ಟು ಹೊತ್ತು ಎಂದು ನಿಲ್ಲುತ್ತೀರಿ?

ಮಾನ್ಯ ಸದಸ್ಯರು:- ಅವರ ರಿಪ್ಲೈ ಮುಗಿದ ಮೇಲೆಯೇ ಹೋಗುತ್ತೇವೆ.

ಅಧ್ಯಕ್ಷರು:- ಆಲ್‌ರೈಟ್.

ಶ್ರೀ ಜೆ.ಹೆಚ್. ಪಟೇಲ್:- ರೆಗ್ಯುಲರೈಸ್ ಮಾಡೋಣ ಎಂದರ ಬೇಡ ಎನ್ನುತ್ತಾರೆ. ಅದಕ್ಕಿನ್ನೇನು ಮಾಡುವುದು? ಅನ್ ಆಥರೈಸ್ಡ ಯೂಸರ್ ಎಂದರೆ ಯಾರು ಎಂದು ಅದರ ಬಗ್ಗೆ ನಾವು ಒಪ್ಪಿಕೊಂಡು ಎಲ್ಲಿ ವರ್ಕ್ ಆರ್ಡರ್ ಇಷ್ಯೂ ಆಗಿ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿ ಮೆಟೀರಿಯಲ್ಸ್ ಕೊಟ್ಟರುತ್ತಾರೆ, ಅದು ರೈತನ ತಪ್ಪಲ್ಲ. ಇನ್ನಾವುದೋ ಕಾರಣದಿಂದ ಬೇರೆಯದಕ್ಕೆ ಕೊಟ್ಟರೆ ಅಂಥ ಅನ್ ಆಥರೈಸ್ಡ್‌ಗೆ ಆಥರೈಸ್ಡ್ ಎಂದು ಅವರಿಗೆ ಅವರ ಮೇಲೆ ಯಾವುದೇ...

MR. SPEAKER:- Supply of material partly or wholly.

ಶ್ರೀ ಜೆ.ಹೆಚ್. ಪಟೇಲ್:- ಹೌದು, partly or wholly. ಅದನ್ನು ನಾವು ಎಕ್ಸೆಂಪ್ಟ್ ಮಾಡಿದ್ದೇವೆ. ಇನ್ನು ವರ್ಕ್ ಆರ್ಡರ್ ಕೊಟ್ಟರುತ್ತಾರೆ. ಮೆಟೀರಿಯಲ್ ರಿಲೀಸ್ ಮಾಡಿರುವುದಿಲ್ಲ. ಇವರು ಎಲ್ಲಿಯೋ ಕಂಟ್ರಾಕ್ಟರನ್ನು ಇಟ್ಟುಕೊಂಡು ಅಲ್ಲಿ ಇಲ್ಲಿ ಮಾಡಿರುತ್ತಾರೆ, ಅವರಿಗೆ ಹತ್ತು ಸಾವಿರದಿಂದ ಐದ ಸಾವಿರ ರೂಪಾಯಿಗೆ ಮಾಡಿದ್ದೇವೆ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದರು ಹತ್ತು ಸಾವಿರ ರೂಪಾಯಿ ಬೇಡ, ಐದು ಸಾವಿರ ಮಾಡೋಣ ಎಂದರು. ಎಸ್.ಸಿ.ಗೆ ಎರಡೂವರೆ ಸಾವಿರ ರೂಪಾಯಿ ಎಂದು ಇದು ಒಂದು. ಇನ್ನು ಎ.ಇ.ಹೆಚ್.ಗೆ ಎಲೆಕ್ಟ್ರಾನಿಕ್ ಮೀಟರನ್ನು ಅಳವಡಿಸಬೇಕು, ಈಗ ಪಂಪುಸೆಟ್ಟುಗಳಿಗೆ ಅಳವಡಿಸಬೇಕು, ಅದಕ್ಕೆ ಟೈಮ್ ಆಗುತ್ತದೆ. ಹತ್ತು ಲಕ್ಷ ಪಂಪ್‌ಸೆಟ್ಟುಗಳಿಗೆ ಬಹಳ ಸಮಯವೇ ಹಿಡಿಯುತ್ತದೆ. ಅದಕ್ಕೆ ಆ ಮೀಟರನ್ನು ತರಿಸಿ ಎಲ್ಲರೂ ನೋಡಿದ್ದೇವೆ. ಈ ಮೀಟರನ್ನು ಫಿಕ್ಸ್ ಮಾಡಿದರೆ ಒಬ್ಬ ಉದ್ಯಮಿ ಅದು ಹೈಟೆನ್ಸ್‌ದ್ದು; ರೈತರದಲ್ಲ. ಇಂಡಸ್ಟ್ರೀಗಳದ್ದು. ಯಾರು ಎಂಟು ವರ್ಷದಿಂದ ವರ್ಷಕ್ಕೆ ನಾಲ್ಕು ಲಕ್ಷ ರೂಪಾಯಿ ಕದಿಯುತ್ತಿದ್ದ, ಅವನ ಮೇಲೆ ಬ್ಯಾಕ್‌ಬಿಲ್ಲಿಂಗ್ ಎಲ್ಲಾ ಆಗಿದೆ ಈ ಮೀಟರ್ ಹಾಕಿದ ಮೇಲೆ ಅವನ ಕಳ್ಳತನ

ಗೊತ್ತಾಗುತ್ತದೆ. ಅದೊಂದು ರೀತಿ ಟಾಕಿಂಗ್ ಮೀಟರ್ ಅದು. ಎಲ್ಲಿ ಏನು ಮಾಡಿದರು, ಯಾವಾಗ ಏನು ಮಾಡಿದರು, ಇದೆಲ್ಲಾ ಹೇಳುತ್ತದೆ. ಬ್ಯಾಕ್ ಬಿಲ್ಲಿಂಗ್ ಏಕ್ಸಾಕ್ಟ್ ಆಗಿ ಗೊತ್ತಾಗುತ್ತದೆ. ಈ ರೀತಿ ನಾವು ಕಳ್ಳತನ ನಿಲ್ಲಿಸುವುದಕ್ಕೋಸ್ಕರ ಇಂಡಸ್ಟ್ರಿಗೆ ಆಗಲಿ, ಬೇರೆಯದಕ್ಕಾಗಲಿ ಇದನ್ನು ಮಾಡುತ್ತೇವೆ. ರೈತರು ಕದಿಯುತ್ತಾರೆ ಎಂದು ಹೇಳುವುದಿಲ್ಲ. ರೈತರು ಕದಿಯುವುದಿಲ್ಲ. ಆದರೆ ಎಷ್ಟು ಉಪಯೋಗವಾಗುತ್ತದೆ ಎನ್ನುವುದಾದರೂ ಗೊತ್ತಾಗಬಹುದು. 40 ರಿಂದ 45 ಪರ್‌ಸೆಂಟ್ ಎಂದು ಹೇಳುತ್ತೇವೆ. It may not be true. ಅದನ್ನು ಕರಾರುವಕ್ಕಾಗಿ ತಿಳಿದುಕೊಳ್ಳುವುದಕ್ಕೋಸ್ಕರ ಅದನ್ನು ಮಾಡಬೇಕು. ಅದನ್ನು ಫೇಸ್ಡ್ ಮ್ಯಾನರ್‌ನಲ್ಲಿ ಮಾಡಬೇಕಾಗುತ್ತದೆ ಆಲ್ ಎಲೆಕ್ಟ್ರಿಕ್ ಹೋಮ್ಸ್‌ನಲ್ಲಿ ಫೇಸ್ಡ್ ಮ್ಯಾನರ್‌ನಲ್ಲಿ ಮಾಡಬೇಕು. Whether this Meter is really working scientificlly and accurately? ಎಂಬುದನ್ನು ನೋಡುವುದಕ್ಕೋಸ್ಕರ ಇದನ್ನು ಕೂಡ ಫೇಸ್ಡ್ ಮ್ಯಾನರ್‌ನಲ್ಲಿ ಮಾಡುತ್ತೇನೆ. ಈಗೇನು ಆನ್ ಆಥರೈಸ್ಡ್ ಎಂದು ಇತ್ತು, ಅದನ್ನು ಕೆಲವುಗಳಿಗೆ ಎಕ್ಸೆಂಪ್ಟ್ ಮಾಡಿದ್ದೇವೆ. ಈ ಆಧಾರದ ಮೇಲೆ ಸರ್ಕಾರಿ ಆಫೀಸ್ಗಳಾಗುತ್ತದೆ. ಜನರಿಗೂ ಯಾವುದೇ ರೀತಿ ಹೆರ್ಯಾಸ್‌ಮೆಂಟ್ ಆಗುವುದಿಲ್ಲ. ಕೆ ಇ ಬಿಗೆ ಕಳ್ಳತನ ಆಗುತ್ತಿರುವುದನ್ನು ನಿಲ್ಲಿಸಿ ದುಡ್ಡು ಬರುವ ಹಾಗೆ ಮಾಡಬಹುದು. ನೋಡಿ, 24 ಲಕ್ಷ ರೂಪಾಯಿ ಒಂದರಲ್ಲಿಯೇ ಹೋಗಿ ಬಿಡುತ್ತಿತ್ತು. ಅದು ಯಾರಿಗೆ ಗೊತ್ತಾಗುತ್ತಿತ್ತು. ಈ ಕಾರಣದಿಂದ ಮಾಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು, ನಂಜೇಗೌಡರು ಎಲ್ಲರೂ ಬಂದಿದ್ದರು. ಈ ಆಧಾರದ ಮೇಲೆ ನಾವೊಂದು ತೀರ್ಮಾನಕ್ಕೆ ಬಂದಿದ್ದೇವೆ. ಅವರ ಇಚ್ಛೆ ಪ್ರಕಾರ ಇದನ್ನು ಅಮೆಂಡ್ ಮಾಡಿದ್ದೇನೆ. ಮಾನ್ಯ ಸದಸ್ಯರು ಕೋ-ಆಪರೇಟ್ ಮಾಡಬೇಕು.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ):- ಮಾನ್ಯ ಅಧ್ಯಕ್ಷರೇ, ಒಂದನ್ನು ಕ್ಲಿಯರ್ ಆಗಿ ಕ್ಲಾರಿಫೈ ಮಾಡಲಿಲ್ಲ. ಎಲೆಕ್ಟ್ರಾನಿಕ್ ಮೀಟರ್‌ನ್ನು ಎಇ ಹೆಚ್ ಹೌಸಸ್‌ಗೆ ಡಿಪಾಸಿಟ್ ಕಲೆಕ್ಟ್ ಮಾಡುವುದು ಇದೆಯಲ್ಲಾ, ಇದನ್ನು ಇನ್‌ಸ್ಟಾಲ್ ಮಾಡಿದ ಮೇಲೆ ಕಲೆಕ್ಟ್ ಮಾಡಬೇಕು.

ಶ್ರೀ ಜೆ.ಹೆಚ್. ಪಟೇಲ್:- ಹೌದು. ಅವರು ಮೀಟರನ್ನು ಫಿಕ್ಸ್ ಮಾಡಿದ ಮೇಲೆ ಕಲೆಕ್ಟ್ ಮಾಡಬೇಕೇ ಹೊರತು ಈಗಲೇ ಅಡ್ವಾನ್ಸ್ ತೆಗೆದುಕೊಳ್ಳುವುದಲ್ಲ. ಮೂರು ಇನ್‌ಸ್ಟಾಲ್‌ಮೆಂಟ್‌ನಲ್ಲಿ ಕಲೆಕ್ಟ್ ಮಾಡಬೇಕು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ನಮ್ಮೆಲ್ಲರ ಅನಿಸಿಕೆ ಏನಿತ್ತು ಮತ್ತು ಬೇಡಿಕೆ ಏನಿತ್ತು ಎಂದರೆ ನಾವು 2-1-97ಕ್ಕೆ ಇಷ್ಯೂ ಮಾಡಿದಂಥ ಸರ್ಕ್ಯುಲರ್ ಮತ್ತು 31-12-96ಕ್ಕೆ ಸರ್ಕ್ಯುಲರ್ ಎರಡನ್ನೂ ಕೂಡ ತಾವು ವಿತ್‌ಡ್ರಾ ಮಾಡಿಕೊಳ್ಳಬೇಕೆನ್ನುವುದೇ ನಮ್ಮ ಹಠ ಇತ್ತು. ಆದರೆ ಅದಕ್ಕೆ ಮುಖ್ಯಮಂತ್ರಿಗಳು ಒಪ್ಪಲಿಲ್ಲ ಮತ್ತು ಸರ್ಕಾರದವರೂ ಕೂಡ ಸುಮಾರು ಯಾವುದೇ ರೀತಿಯಿಂದ ಅದನ್ನು ವಿತ್‌ಡ್ರಾ ಮಾಡುವುದಕ್ಕೆ ಅವರು ತಯಾರು ಇಲ್ಲ. ಕೊನೆಯ ಪಕ್ಷ ಏಕೆಂದರೆ ರೈತರ ಹಿತವನ್ನೂ ನಾವು ನೋಡಬೇಕು ಮತ್ತು ಆಟ್ ದಿ ಸೇಮ್ ಟೈಮ್ ನಾವು ಪ್ರತಿ ಸಲ ಧರಣಿ ಮಾಡುವುದು, ವಾಕೌಟ್ ಮಾಡುವುದು, ಅಡ್ಡಿ ಆತಂಕಗಳನ್ನು ವಿರೋಧ ಪಕ್ಷದವರು ಮಾಡುತ್ತಾರೆ. ಬಾಕಿ ಟೈಮ್‌ನಲ್ಲಿ ಸದನ ಕರೆಯಲಿಲ್ಲ

ಎನ್ನುತ್ತಾರೆ, ಕರೆದಾಗ ಮಾತ್ರ ಅವರು ಈ ಕೆಲಸವನ್ನು ಮಾಡದೆ ಏನು ತಮ್ಮ ವಾದವನ್ನು ಮಂಡಿಸಬೇಕೋ ಅದನ್ನು ಮಂಡಿಸುವುದಿಲ್ಲ ಎನ್ನುವ ಅಭಿಪ್ರಾಯ ಅನೇಕ ಸಾರಿ ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಹೊರಗಡೆ ಹೇಳಿದ್ದಾರೆ. ಅದಕ್ಕೆ ನಮ್ಮ ವಿರೋಧವಿತ್ತು ಮತ್ತು ಎಲ್ಲಾ ಸದಸ್ಯರೂ ಕೂಡ ಒಪ್ಪದೇ ಇರುವ ಪರಿಸ್ಥಿತಿ ಇತ್ತು. ಇದ್ದರೂ ಕೂಡ ಏನಾದರೂ ಸ್ವಲ್ಪವಾದರೂ ಮಾತುಕತೆಗೆ ಬರಲಿ ಎನ್ನುವ ದೃಷ್ಟಿಯಿಂದ ಒಂದು ಹಂತಕ್ಕೆ ಬರಬೇಕು ಎಂದು ಹೇಳಿ ನಾವೊಂದು ಪ್ರಸ್ತಾವನೆಯನ್ನು ಅವರ ಮುಂದಿಟ್ಟಿದ್ದೆವು. ಬಹಳ ದೀರ್ಘಕಾಲ ಚರ್ಚೆಯಾದ ಮೇಲೆ ಅದು ತಮ್ಮ ಅಧ್ಯಕ್ಷತೆಯಲ್ಲಿ ಹೆಚ್ಚುಕಡಿಮೆ ಮಾತುಕತೆಗಳು ನಡೆದವು. ಅದರಲ್ಲಿ ಮೊದಲನೆಯದು ರೈತರು ಈಗಾಗಲೇ ತಮ್ಮ ಅರ್ಜಿಯನ್ನು ಅರ್ಜಿ ಠೇವಣಿಯೊಂದಿಗೆ ಸಲ್ಲಿಸಿದ್ದು ಅಂಥವರ ಪಂಪ್‌ಸೆಟ್ಟುಗಳನ್ನು ಸಕ್ರಮಗೊಳಿಸುವಾಗ ಯಾವುದೇ ವಿಧವಾದ ಶುಲ್ಕವನ್ನು ವಿಧಿಸಬಾರದು. ಹಾಗು ಈ ಬಗ್ಗೆ ಪ್ರಸ್ತಾಪಿಸಿರುವ ಒಂದು ಅಶ್ವ ಶಕ್ತಿಗೆ 300 ರೂಪಾಯಿಗಳ ದಂಡವನ್ನು ಸಹ ವಿಧಿಸಬಾರದು ಎಂದು ನಮ್ಮ ಮೊದಲಿನ ಬೇಡಿಕೆ ಇತ್ತು. ಈಗ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಎಂದರೆ ಯಾವುದೇ ಒಂದು ರೀತಿಯಲ್ಲಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಒಂದು ಪರ್ಸೆಂಟ್ ಮೆಟೀರಿಯಲ್ ಕೂಡ ಸಪ್ಲೈ ಆಗಿದ್ದರೆ ಅಂತಹ ಐಪಿ ಸೆಟ್‌ಗಳಿಗೆ ನಾವು ಅನ್ ಅಥರೈಸ್ಡ್ ಎಂದು ಇದ್ದರೂ ಕೂಡ ರೆಗ್ಯುಲರೈಸ್ ಮಾಡಬೇಕು ಮತ್ತು ಯಾವ ದಂಡವನ್ನೂ ಅದಕ್ಕೆ ವಿಧಿಸಬಾರದು ಎಂದು ಹೇಳಿದ್ದರೆ, ಕೇವಲ 300 ರೂಪಾಯಿ ಮಾತ್ರ ಹಾರ್ಸ್ ಪವರ್‌ಗೆ ಇರತಕ್ಕದ್ದು ಎಂದು ಹೇಳಿದ್ದಾರೆ ತಾವು ಬರೇ 10 ಸಾವಿರ ಎಂದು ಹೇಳುತ್ತಿದ್ದೀರಿ. ಇದರ ಹಿಂದೆ ಇರತಕ್ಕ ಈ ಆರ್ಡರ್‌ನಲ್ಲಿ ಏನು ಇದೆ ಎಂದರೆ ಎಸ್ಟಿಮೇಟ್‌ಡ್ ಕಾಸ್ಟ್ ಎಷ್ಟು ಇರುತ್ತದೆ ಎಂದು ಹೇಳುತ್ತಿದ್ದೇನೆ. ನಾವು ಇದರ ಹಿನ್ನಲೆ ಹೇಳಿದರೆ ಗೊತ್ತಾಗುತ್ತದೆ. ಏಕೆಂದರೆ ಹಿಂದೆ ಎಷ್ಟಿತ್ತು ನಾವೇನು ಕೇಳಿದ್ದೇವು ಅವರೇನು ಒಪ್ಪಿಕೊಂಡಿದ್ದು ಅಥವಾ ಒಪ್ಪಿಕೊಳ್ಳದೇ ಇರುವುದು, ನಾವೆಲ್ಲಾ ಜನರಿಗೆ ಗೊತ್ತಾಗುತ್ತದೆ. ಏಕೆಂದರೆ ಹತ್ತು ಸಾವಿರ ರೂಪಾಯಿ ಮಿನಿಮಮ್. ಇಲ್ಲ ಎಂದರೆ ಎಷ್ಟು ಅಂದಾಜು ಮಾಡಿದ್ದಾರೊ ಅಷ್ಟು. ಒಂದು ಲಕ್ಷ ಇರಬಹುದು, 20 ಸಾವಿರ ಇರಬಹುದು ಅಥವಾ 30 ಸಾವಿರ ಇರಬಹುದು. ಅಂದಾಜಿನ ಮೇಲೆ ಎಷ್ಟು ಕೊಡಬೇಕು ಎನ್ನುವುದು ಇತ್ತು ಅದೇ ರೀತಿಯಾಗಿ ಎಸ್‌ಸಿ/ಎಸ್‌ಟಿನವರಿಗೂ ಕೂಡ ಸಂಪೂರ್ಣವಾದ ಅಂದಾಜು ವೆಚ್ಚ ಅಥವಾ ಐದು ಸಾವಿರ ರೂಪಾಯಿ ಕೊಡಬೇಕು. ಯಾವುದರಲ್ಲಿ ಹೆಚ್ಚು ಇದೆ, ಅದು. ಅಂದರೆ ಹೆಚ್ಚಿಗೆ 30 ಸಾವಿರ ಇದ್ದರೆ ಮೂವತ್ತು ಸಾವಿರ ರೂಪಾಯಿ ಕೊಡಬೇಕು, 20 ಸಾವಿರ ಇದ್ದರೆ 20 ಸಾವಿರ ಕೊಡಬೇಕು ಎನ್ನತಕ್ಕ ಸುತ್ತೋಲೆ ಇತ್ತು. ಕೊನೆಗೆ ಇದನ್ನು ಇವತ್ತು ಮಾಡಿಫೈ ಮಾಡಿ ಕೇವಲ 300 ರೂಪಾಯಿಗಳಿಗೆ ಮಾತ್ರ ನಾವು ಸೀಮಿತ ಆಗಬೇಕು ಎಂದು ಒಪ್ಪಿಕೊಂಡಿದ್ದೀರಿ. ಎರಡನೆಯದು, ಏನು ಅಂದರೆ ಈಗ ಸಂಪೂರ್ಣವಾಗಿ ಅನಧಿಕೃತ ಇರತಕ್ಕಂತಹವು. ಯಾವುದಕ್ಕೆ ಮೆಟೀರಿಯಲ್ ಇಷ್ಯೂ ಆಗಿಲ್ಲ ಅಥವಾ ಆಫೀಸಿನಿಂದ ಸೂಚನೆ ಹೋಗಿಲ್ಲ. ಅಂತಹವಕ್ಕೆ ಫ್ಲಾಟ್ ರೇಟ್ ಹಾಕಿ. ಐದು ಸಾವಿರ ರೂಪಾಯಿ ಹಾಕಿ. ನಮ್ಮ ಸಿ ಎ ಎಂದ ಶ್ರೀರಾಮ ರೆಡ್ಡಿಯವರೂ ಹೇಳುತ್ತಿದ್ದರೂ. ನಮ್ಮ ಬೇಡಿಕೆ ಸಹ ಅದು. ನಮ್ಮ ವೈ. ರಾಮಕೃಷ್ಣ ಅವರು, ನಾವೆಲ್ಲಾ ಪ್ರಸ್ತಾಪ ಮಾಡಿದಾಗ ಸಾವಿರ ರೂಪಾಯಿಗೆ ಲಿಮಿಟ್ ಇರಬೇಕು ಎನ್ನುವುದು ಇತ್ತು. ಆದರೆ ಇದು ಯಾವುದೋ ಒಂದು

ರೀತಿಯಲ್ಲಿ ಇತ್ಯರ್ಥ ಮಾಡಬೇಕು ಎನ್ನುವ ದೃಷ್ಟಿಯಿಂದ ಐದು ಸಾವಿರ ರೂಪಾಯಿ ಮತ್ತು 2,500 ಎಂದು ಹೇಳಿ ಈ ಒಂದು ಆಧಾರಕ್ಕೆ ನಾವು ಹೆಚ್ಚು ಕಡಿಮೆ ಒಪ್ಪಿಗೆಗೆ ಬಂದ ಹಾಗೆ ಆಯಿತು. ಆದರೆ ಇನ್ನೊಂದು ವಿಚಾರ ಎಂದರೆ ನಮ್ಮ ಬೇಡಿಕೆ ಏನು ಇತ್ತು ಅಂದರೆ Metal Box charges should not be collected. ಇದನ್ನು ಅವರು ಒಪ್ಪಿಕೊಂಡಿದ್ದಾರೆ. ನಾವು ಅದಕ್ಕಾಗಿ 960 ರೂಪಾಯಿಗಳನ್ನು ಕಲೆಕ್ಟ್ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಆಮೇಲೆ ಎ.ಇ.ಹೆಚ್.ಗಳಿಗೆ Collection of Meter Deposit to be deferred until they are field-tested properly and market survey made to know the correct value and efficiency.

ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಈ ಮೀಟರ್ಸ್ ಬಗ್ಗೆ ಇನ್ನೂ ಸ್ಪಷ್ಟವಾದ ಯಾವುದೇ ಒಂದು ಸರ್ಟಿಫಿಕೇಟ್ ಕೊಟ್ಟಿಲ್ಲ. ಇದನ್ನು ನಾವು ಹೇಳುತ್ತಾ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್:- ಸಿಪಿಆರ್ಐ ನವರು ಸರ್ಟಿಫೈ ಮಾಡಿದ ಮೇಲೇಯೇ ಬಿಎಚ್ ಇಎಲ್ ನವರು ಸಪ್ಲೈ ಮಾಡುವುದು, certified by Central Research Institute.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದು ಆಯಿತು. ಇದು ನನ್ನ ಅಭಿಪ್ರಾಯ ಅಲ್ಲ. ಕೆಇಬಿಯ ಅಧ್ಯಕ್ಷರು, ಫೈನಾನ್ಸ್ ಮೆಂಬರ್ಸ್ ಟೆಕ್ನಿಕಲ್ ಮೆಂಬರ್ಸ್ ಇವರೆಲ್ಲಾ ಈ ಡಿಸಿಷನ್ ತೆಗೆದುಕೊಂಡಾಗ ಕೆಲವು ಸಲಹೆಗಳನ್ನು ಅಲ್ಲಿ ಮಾಡಿದ್ದನ್ನೂ ನಾನು ಹೇಳುತ್ತೇನೆ. ಏನು ಕೆ.ಇ.ಬಿ. ಫೈನಾನ್ಸ್‌ನಲ್ಲಿರತಕ್ಕ ಕೆಲವರು ಹಾಗೆ ಹೇಳಿದ್ದಾರೆ ಎಂದರೆ ಮೆಂಬರ್ಸ್‌ನಲ್ಲಿ ಯಾರಾದರೂ ಒಬ್ಬರು ಹಾಗೆ ಹೇಳುತ್ತಿರುತ್ತಾರೆ ಆದ್ದರಿಂದ ನಾವು ಕೇಳಬೇಕಾಗುತ್ತದೆ ಎನ್ನತಕ್ಕ ಮಾತು ಹೇಳಿದರು.

ಶ್ರೀ ಜೆ.ಹೆಚ್. ಪಟೇಲ್:- ಎಲೆಕ್ಟ್ರಾನಿಕ್ಸ್ ಮೀಟರ್ಸ್ ಬಗ್ಗೆ ಒಳ್ಳೆಯ ಮಾಹಿತಿ ಇರತಕ್ಕಂಥ ಅತ್ಯಂತ ಉತ್ತಮವಾದ ತಂತ್ರಜ್ಞರನ್ನು ಕೇಳಿ ಹೇಳಿದ್ದೇವೆ. ಕೆ ಇ ಬಿಯಲ್ಲಿ ಗೊತ್ತಿಲ್ಲದೇ ಇರುವವರು ಇರಬಹುದು. ಫೈನಾನ್ಸ್ ಮೆಂಬರ್‌ಗೂ, ಟೆಕ್ನಿಕಲ್ ಮೆಂಬರ್‌ಗೂ ವ್ಯತ್ಯಾಸ ಇದೆ. ಫೈನಾನ್ಸ್ ಮೆಂಬರ್ ಹಣಕಾಸಿನ ವಿಚಾರ ನೋಡುತ್ತಾನೆಯೇ ಹೊರತು ಟೆಕ್ನಿಕಲ್ ವಿಚಾರ ಗೊತ್ತಲ್ಲದೇ ಇರಬಹುದು.

SRI M. MALLIKARJUNA KHARGE:- Then tell me, What is the Board?

MR. SPEAKER:- There is a missing link. ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರುವುದರಲ್ಲಿ ಹಾಗೂ ತಾವು ಹೇಳುತ್ತಿರುವುದರಲ್ಲಿ ಒಂದು ವಿಚಾರವನ್ನು ನೀವು ಗಮನಿಸಿಕೊಳ್ಳುತ್ತಿಲ್ಲ. ಬೋರ್ಡ್ ಮೀಟಿಂಗ್ ಆದನಂತರ, ನೀವೇನು ಕೆಲವು ಸದಸ್ಯರುಗಳು ಇದು ಸರಿಯಿಲ್ಲ ಎಂದು ಹೇಳಿದ್ದಾರೆ ಎಂದು ಹೇಳುತ್ತಿದ್ದೀರಿ, ಇದು ಆದನಂತರದ ಬೆಳವಣಿಗೆ ಏನೆಂದರೆ ಸಿಪಿಆರ್ಐ ನವರು ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನವರು ಇಬ್ಬರೂ ಕೂಡ ಈ ಇನ್ಸ್ಟ್ರುಮೆಂಟ್‌ನ್ನು ಸರ್ಟಿಫೈ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಮ್ಮ ಮಾತಿಗೆ ನಾವು ಒಪ್ಪಿಕೊಳ್ಳುತ್ತೇವೆ. ನಾನು ಏಕೆ ಹೇಳುತ್ತೇನೆ ಎಂದರೆ ಅಲ್ಲಿ ಕೆಲಸ ಮಾಡತಕ್ಕಂತಹವರ ಹತ್ತಿರ ಈ ಕನ್‌ಫ್ಯೂಷನ್ ಇದ್ದಾಗ..

ಅಧ್ಯಕ್ಷರು:- ಅವತ್ತಿನ ಪರಿಸ್ಥಿತಿಯಲ್ಲಿ ಇದ್ದಿರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ಕನ್‌ಫ್ಯೂಷನ್ ಇದ್ದಾಗ ಹತ್ತು ಲಕ್ಷ ಕನ್ಸ್ಯೂಮರ್ಸ್‌ಗೆ ಈ ಅನುಮಾನ ಬರುತ್ತಿದೆ. ಆದ್ದರಿಂದ ಅದನ್ನು ನಾನು ಹೇಳುತ್ತಿದ್ದೇನೆ. ನಾನು ಬಿ ಎಚ್ ಇ ಎಲ್ ಬಗ್ಗೆ ಡೌಟ್ ಮಾಡುತ್ತಾ ಇಲ್ಲ. ಅದೂ ಒಂದು ಸಾರ್ವಜನಿಕ ಉದ್ದಿಮೇ ಇದೆ. ಆದರೆ ಆ ಸಾರ್ವಜನಿಕ ಉದ್ದೆಮೆಯವರನ್ನು ಬಿಟ್ಟು ಮತ್ತೆ ಬೇರೆ ಯಾರಾದರೂ ಖಾಸಗಿ ಕಂಟ್ರಾಕ್ಟರ್‌ಗೆ ಕೊಟ್ಟು ರಾದ್ಧಾಂತ ಮಾಡಿದರೆ ಮತ್ತೆ ಅದು ಬೇರೆ ವಿಷಯ. ಮತ್ತೆ ಅದು ಇಲ್ಲಿ ಚರ್ಚೆಗೆ ಬರುತ್ತದೆ. ನಾವೆಲ್ಲರೂ ಕೂಡ ಆಗ ಸುಮ್ಮನೇ ಕೂರುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾನು ತಮ್ಮ ಗಮನಕ್ಕೆ ತರುತ್ತೇನೆ. ಅದು ಒಂದು ನಿಮಿಷ ಸಹ ಆಗುವುದಿಲ್ಲ.

MR. SPEAKER:- These Meters are manufactured by BHEL,

SRI M. MALLIKARJUNA KHARGE:- Under the Leading "Electronic Energy Meters are trouble-free", it is stated, " "opinions on such matters can be expressed only after accumulating field experience by installing reasonable numbers of the new types in different geographical locations and in different ambit conditions and where load conditions fluctuate. After a reasonable period of service and continuous monitoring of performance of the Meters, say for two years, three years or five years, one can come to the conclusion that there is evidence to believe that the K.E.B. has this experience, since EEM are coming to the market only very recently and in small numbers." ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ ಇದು ಒಂದು ಎಕ್ಸಪೆರಿಮೆಂಟ್ ಇರಬಹುದು, ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಅದೂ ಬಿ ಎಚ್ ಇ ಎಲ್ ನವರು ಕೊಟ್ಟಂತಹ ಒಂದು ಎಕ್ಸ್‌ಪೆರಿಮೆಂಟ್ ಮೇಲೆ ಅಥವಾ ಅಖಿಲ ಭಾರತ ರೀಸರ್ಚ್ ಸ್ಟೇಷನ್‌ನವರು ಕೊಟ್ಟಂತಹ ಅಭಿಪ್ರಾಯದ ಮೇಲೆ ಇದ್ದರೆ ನಮ್ಮ ತಾಪತ್ರಯ ಇಲ್ಲ. ಅದನ್ನು ಒಪ್ಪೋಣ. ಆದರೆ ಯಾವಾಗ ಸಂಶಯ ಇದ್ದ ಮೇಲೆ, ಹತ್ತು ಲಕ್ಷ ಆಲ್ ಎಲೆಕ್ಟ್ರಿಕ್ ಹೋಮ್‌ಗಳಿಗೆ ಒಂದೇ ದಿವಸ ಅಥವಾ ಒಂದೇ ವರ್ಷದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಹಂತಹಂತವಾಗಿ ಮಾಡಬೇಕು. ಹಂತಹಂತವಾಗಿ ಮಾಡಬೇಕು ಎಂದಾಗ ತಮಗೆ ನಾವು ಹೇಳಿದ್ದುದು ಏನು ಅಂದರೆ ಎಲ್ಲಿ ತಾವು ಮೀಟರನ್ನು ಫಿಕ್ಸ್ ಮಾಡುತ್ತೀರಿ, ಅಂದಿನಿಂದ ಒಂದು ವರ್ಷದೊಳಗೆ ಅವನು ಪ್ರತಿ ತಿಂಗಳು 50, 60 ಕೊಡುವುದಕ್ಕೆ ವ್ಯವಸ್ಥೆ ಆ ರೀತಿಯಾಗಿ ಮಾಡಬೇಕು ಎನ್ನತಕ್ಕದ್ದು ಇತ್ತು. ನಮ್ಮದಂತೂ ಮೀಟರೇ ತೆಗೆಯಿರಿ

ಎನ್ನತಕ್ಕದ್ದು ಇದೆ. ಏಕೆಂದರೆ ಹಳೆಯ ಮೀಟರೇ ಸರಿಯಾಗಿ ಕೆಲಸ ಮಾಡುತ್ತಿವೆ. ಆದರೆ ನೀವು ವೈಜ್ಞಾನಿಕವಾಗಿ ಇದನ್ನು ಸಂಶೋಧನೆ ಮಾಡಿದ್ದು ಇದೆ ಮತ್ತು 24 ಲಕ್ಷ ರೂಪಾಯಿಗಳ ಲಾಭ ಇದರಿಂದ ನಮಗೆ ಬರುತ್ತಿದೆ ಎನ್ನತಕ್ಕ ಮಾತನ್ನು ಹೇಳಿ, ತಮ್ಮ ಹಠವನ್ನು ಸಾಧಿಸಿದ್ದೀರಿ. ನಾವು ಇಲ್ಲಿ ಜಗಳ ಆಡುವುದಕ್ಕೆ ಅಂತೂ ಬರುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಆರ್ಗ್ಯುಮೆಂಟ್ ಮಾಡಬೇಕು, ಡಿಸ್ಕಷನ್ ಮಾಡಬೇಕು. ಮನ ಒಲಿಸಬಹುದು. ತಮ್ಮ ಮುಖಾಂತರ ಅವರಿಗೆ ಹೇಳಬಹುದು. ಅಷ್ಟಾದ ಮೇಲೂ ಕೂಡ ಅವರು ಒಪ್ಪಲಿಲ್ಲ ಎಂದರೆ, ಮೊಂಡುತನದಲ್ಲಿ ನಿಂತರೆ, ಕೊನೆಗೆ ನೀವು ಹೇಳಿದ್ದನ್ನು ನಾವು ಕೇಳುತ್ತೇವೆ ಅಧ್ಯಕ್ಷರೆ;

ಅಧ್ಯಕ್ಷರು:- ಎಲ್ಲಾ ನೀವು ಹೇಳಿದ್ದನ್ನೇ ಅವರು ಕೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮ್ಮ ಕಡೆ ನೋಡಿ. ಆ ಕಡೆ ಹೇಳುತ್ತಿದ್ದೀರಿ.

MR. SPEAKER:- If I were to be a fair judge, ನೀವು ಹೇಳಿದ್ದೆಲ್ಲಾ ಅವರು ಒಪ್ಪಿಕೊಂಡಿದ್ದಾರೆ. ಪ್ರಾಯಶಃ ಇಷ್ಟು ಲಿಬರಲ್ ಆಗಿರತಕ್ಕ ಲೀಡರನ್ನು ನಾನು ನೋಡಿಲ್ಲ. ಹಿಂದಿನ ಲೀಡರ್‌ರವರೇ ಇದ್ದಿದ್ದರೆ ನಿಮ್ಮ ಮಾತಿಗೆ ಜಗ್ಗುತ್ತಲೇ ಇರಲಿಲ್ಲ. He is a very liberal man. Let me be fair to him. He is a fine man. ಏನೂ ಮಾಡುವ ಹಾಗೆ ಇಲ್ಲ. ನೀವು ಎಲ್ಲರೂ ಕಾಂಪ್ಲಿಮೆಂಟ್ ಮಾಡಬೇಕು. ಎಲ್ಲಾ ಮಾಡಿದ ಮೇಲೆ ಮತ್ತೆ ಅವರ ಮೇಲೆ ಆಕ್ಷೇಪಣೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ತಮ್ಮ ಜೊತೆ ಇದ್ದಾಗ ಸರಿ ಇರುತ್ತಾರೆ. ನಿಮ್ಮ ರೂಮ್ ಬಿಟ್ಟು ಈ ಕಡೆ ಬಂದರಲ್ಲಾ, ಅಫಿಷಿಯಲ್ ಗ್ಯಾಲರಿಗೆ ಬಂದಾಗ ಛೇಂಜ್ ಆಗಿ ಬಿಡುತ್ತಾರೆ. ಮತ್ತೆ ಈ ಕಡೆ ಕರೆದುಕೊಂಡು ಬರಬೇಕು. ಅದಕ್ಕೇ ನಾವು ಮೂರು ಸಲ ನಿಮ್ಮ ಛೇಂಬರಿಗೆ ಕರೆದುಕೊಂಡು ಬಂದಿದ್ದೇವೆ. ಇಲ್ಲಿ ಬಂದರೆ ಬದಲಾವಣೆ ಆಗುತ್ತಾರೆ. ಅಲ್ಲಿ ಹೋಗಿ ಛೇಂಜ್ ಆಗುತ್ತಾರೆ.

ಅಧ್ಯಕ್ಷರು:- ಅದಕ್ಕೇ ನಾನು ಹೇಳುವುದು ನೀವೂ ಅವರೂ ನನ್ನ ಜೊತೆಗೆ ಇರಿ ಎಲ್ಲಾ ನೆಟ್ಟಗೆ ಇರುತ್ತದೆ. ನೀವು ಬೇರೆ ಬೇರೆ ಹೋಗುತ್ತೀರಿ, ನನಗೆ ಇಲ್ಲದಿರುವ ಪ್ರಾಬ್ಲಮ್ ಎಲ್ಲಾ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದರ ಬಗ್ಗೆ ಇವತ್ತಿನ ದಿವಸ ಈ ಒಂದು ವಿಚಾರ ಇದೆ. ಈ ಮಾತೂ ಕೂಡ ಅಲ್ಲಿ ಪ್ರಸ್ತಾವನೆ ಆಗಿದೆ.

ಅಧ್ಯಕ್ಷರು:- ತಾವು ಮರೆತಿರಿ. ಮೀಟರ್ಸ್‌ನ್ನು ಹಂತಹಂತವಾಗಿ ಫಿಕ್ಸ್ ಮಾಡಿಸುತ್ತೇವೆ. ಮೀಟರ್ಸ್ ಫಿಕ್ಸ್ ಮಾಡಿದ ಮೇಲೆ ಡಿಪಾಸಿಟ್‌ನ್ನು ಕಲೆಕ್ಟ್ ಮಾಡುತ್ತೇವೆ. ಪ್ರೊಪೋಸ್ಡ್ ಅಮೌಂಟನ್ನು ಮೂರು ಕಂತಿನಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಐಪಿ ಸೆಟ್‌ಗೆ ಮೂರು ಕಂತುಗಳು ಎಂದರೆ ಮೂರು ವರ್ಷ. ಅದು ಒಂದು ವಿಚಾರ. ಆಲ್ ಎಲೆಕ್ಟ್ರಿಕ್ ಗೃಹಗಳಿಗೆ ಅದು ಮೂರು ಕಂತು ಎಂದರೆ ಮೂರೇ

ತಿಂಗಳು. ಅದು ತಾಪತ್ರಯ ಆಗುತ್ತದೆ. ಅದಕ್ಕಾಗಿ ನಾವೆಲ್ಲರೂ ಕೂಡ ಒಪ್ಪಲಿಲ್ಲ. ಅದಕ್ಕೇ ನಾವು ಹೇಳಿದ್ದು. ಒಂದು ವರ್ಷದಲ್ಲಿ ಪ್ರತಿ ತಿಂಗಳ ಬಿಲ್ಲು ಅಥವಾ ಎರಡು ತಿಂಗಳಿಗೆ ಒಮ್ಮೆ ಬರುವ ಬಿಲ್‌ನಲ್ಲಿ ಇಷ್ಟು ಅಮೌಂಟ್ ಹಿಡಿದುಕೊಳ್ಳಬಹುದೆಂದು ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ಒಂದು ವರ್ಷ ಎಂದು ನಿಗದಿ ಮಾಡಿ.

ಅಧ್ಯಕ್ಷರು:- ಶಿವಮೊಗ್ಗ ನಗರದಲ್ಲಿ ಅಷ್ಟೊಂದು ಜನ ಎ ಇ ಹೆಚ್‌ನವರು ಇದ್ದಾರೆಯೇ? ಈಶ್ವರಪ್ಪನವರೇ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಷ್ಟೊಂದು ಹಂತಕ್ಕೆ ಮಾತುಕತೆಗೆ ಬಂದಿದೆ. ಅದಕ್ಕಾಗಿ ಅದರ ಬಗ್ಗೆ ಸ್ಪಷ್ಟವಾಗಿ ಹೇಳಿದರೆ ಮುಂದಿನ ಕ್ರಮ ವಿಚಾರ ಮಾಡಬಹುದು.

ಅಧ್ಯಕ್ಷರು:- ಅವರು ಹೇಳಿದ್ದಾರೆ. ನೀವು ಹೇಳಿದ್ದನ್ನೆಲ್ಲಾ ಅವರು ಒಪ್ಪಿಕೊಂಡು ಬಿಟ್ಟಿದ್ದಾರೆ. ನಾನೇನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ ನೀವು ಯಾವ್ಯಾವ ವಿಚಾರವನ್ನು ಪ್ರಸ್ತಾಪ ಮಾಡಿದಿರಿ, ಅದನ್ನೆಲ್ಲಾ ಅವರು ಈಗಾಗಲೇ ಒಪ್ಪಿಕೊಂಡಿದ್ದಾರೆ. ದಯಮಾಡಿ ತಾವೆಲ್ಲಾ ತಮ್ಮ ಸ್ಥಾನಗಳಿಗೆ ಹಿಂದಿರುಗಿದರೆ ಒಂದೆರಡು ನಿಮಿಷ ಕುಳಿತುಕೊಂಡು ವಿಚಾರ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕೆಲವೊಂದು ಒಪ್ಪಿಕೊಂಡಿದ್ದಾರೆ. ಆದರೂ ಕೂಡ ಇದೊಂದು ರಾಜ್ಯದ ರೈತರ ಹಿತದೃಷ್ಟಿಯಿಂದ.

ಅಧ್ಯಕ್ಷರು:- ತಾವೆಲ್ಲಾ ತಮ್ಮ ಸ್ಥಾನಗಳಿಗೆ ಹಿಂದಿರುಗಿದರೆ ಶ್ರೀಮಾನ್ ನಂಜೇಗೌಡರು ಶ್ರೀ ರಾಮರೆಡ್ಡಿಯವರು, ಮಾನ್ಯ ವಾಟಾಳ್‌ರವರು ಎಲ್ಲಾ ಎರಡೆರಡು ನಿಮಿಷ ಮಾತನಾಡುತ್ತಾರೆ. ಇಲ್ಲಿ ನಿಂತುಕೊಂಡು ಏಕೆ ಮಾತನಾಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ವಿಷಯದ ಮೇಲೆ ಇನ್ನೂ ಅನೇಕ ಸದಸ್ಯರು ಬೆಳಕು ಚೆಲ್ಲುವವರು ಇದ್ದಾರೆ. ಅದಕ್ಕೋಸ್ಕರ ಅವರಲ್ಲಿ ನಾನು ಮನವಿ ಮಾಡುತ್ತೇನೆ.

4.20 ಪಿಎಂ

ಅಧ್ಯಕ್ಷರು:- ಎಲ್ಲರನ್ನೂ ತಮ್ಮ ತಮ್ಮ ಸ್ಥಾನಗಳಲ್ಲಿ ಕೂರಿಸಿದರೆ ಚೆನ್ನಾಗಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮ್ಮನ್ನು ಆ ರೀತಿ ಮಾಡಲು ಹೋಗಬೇಡಿ. ನಮ್ಮ ಕಡೆ ತಮ್ಮ ಕಣ್ಣು ಹರಿಸಬೇಡಿ. ಕೆಲವರನ್ನು ದೆಹಲಿಗೆ, ಕೆಲವರನ್ನು ಬಳ್ಳಾರಿ ರಸ್ತೆಗೆ ಇನ್ನೂ ಕೆಲವರನ್ನು ಪಟೇಲರ ಹತ್ತಿರ ಕಳುಹಿಸಿದರೆ ಮಾತ್ರ ಸ್ವಲ್ಪ ಅನುಕೂಲವಾಗುತ್ತದೆ. ಆದುದರಿಂದ, ನಾನು ಎಲ್ಲಾ ಸದಸ್ಯರಲ್ಲೂ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ತಾವೆಲ್ಲರೂ ತಮ್ಮ ಸ್ಥಾನಗಳಿಗೆ ಹಿಂತಿರುಗಿ ತಮ್ಮ ಅಭಿಪ್ರಾಯಗಳೇನಾದರೂ ಇದ್ದರೆ ಹೇಳಬೇಕೆಂದು ತಿಳಿಸುತ್ತೇನೆ.

(ಈ ಹಂತದಲ್ಲಿ ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು ಸದನದ ಬಾವಿಯಿಂದ ತಮ್ಮ ಸ್ಥಾನಗಳಿಗೆ ಹಿಂತಿರುಗಿಸಿದರು)

+ **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-** ಮಾನ್ಯ ಸಭಾಧ್ಯಕ್ಷರೆ, ಮುಖ್ಯಮಂತ್ರಿಗಳದ್ದು ಮಾತಿನ ಪ್ರಕಾರ ಒಪ್ಪಿಗೆಯಾಗಿದ್ದರೆ ಬೇಗ ಮುಗಿದು ಹೋಗುತ್ತಿತ್ತು, ಅವರ ಧಾರಾಳತನವನ್ನು ಕೆಲವರು ಹಿಡಿಯುತ್ತಿದ್ದಾರೆ. ಅವರ ಧಾರಾಳತನವನ್ನು ನಾವೆಲ್ಲರೂ ಸಂತೋಷಪಡುವಂತಾದ್ದೇ ಆಗಿದೆ. ಅವರು ಬೆಳಿಗ್ಗೆ 9.30 ಗಂಟೆಗೆ ಸರಿಯಾದ ಕಾಲಕ್ಕೆ ಬಂದರು. ಸ್ವಲ್ಪ ಹೆಚ್ಚು-ಕಡಿಮೆ ನೀವು ಹೇಳಿದ್ದನ್ನು ನಾನು ಒಪ್ಪುತ್ತೇನೆ: ನೀವು ಹಿಂದಿನ ಮುಖ್ಯಮಂತ್ರಿಗಳಿಗೂ ಇಂದಿನ ಮುಖ್ಯ ಮಂತ್ರಿಗಳಿಗೆ ಹೋಲಿಕೆ ಮಾಡಿದಿರಿ. ನಾನು ಮಾನ್ಯಮುಖ್ಯ ಮಂತ್ರಿಗಳಾದ ಜೆ.ಹೆಚ್. ಪಟೇಲ್‌ರವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸರ್ವವಿದ್ಯುತ್ ಸಂಪರ್ಕಗಳಿಗೆ ಹೊಸ ಮೀಟರ್‌ಗಳನ್ನು ಅಳವಡಿಸಲು ಈಗ ಹತ್ತು ಲಕ್ಷ ಮೀಟರ್‌ಗಳು ತಯಾರಾಗಿಲ್ಲದಿರುವ ಪ್ರಶ್ನೆಯಿರುವುದರಿಂದ ಹಂತ ಹಂತವಾಗಿ ಯಾವ ಮೀಟರ್‌ಗಳನ್ನು ಅಳವಡಿಸಬಹುದು ಎನ್ನುವುದರ ಬಗ್ಗೆ ನಾವು ಒಂದು ಸಲಹೆ ಕೊಟ್ಟಿದ್ದೆವು. ತಾವೇ ಸ್ವತಃ ಮೀಟರ್‌ಗಳ ಶಕ್ತಿ ಬಗ್ಗೆ ಪರೀಕ್ಷಿಸಬೇಕೆಂದು ಹೇಳಿದಿರಿ. ಈಗ ಅಧಿಕಾರಿಗಳು ನಿಮ್ಮ ಬಳಿ ಬಂದು ಮೀಟರ್ ಬಿ.ಹೆಚ್.ಇ.ಎಲ್. ನಿಂದ ತಯಾರಾಗಿದ್ದು ಒಂದು ಮೀಟರ್‌ಗೆ ರೂ. 1275.00 ಆಗುತ್ತದೆಂದು ಹೇಳಿದರು. ಆದರೆ, ನಾವು ನಿಮಗೆ ಏನು ಸಲಹೆ ಕೊಟ್ಟದ್ದು ಎಂದರೆ, ಆ ಮೀಟರ್‌ಅನ್ನು ತಾವೇ ತರಿಸಿಕೊಳ್ಳಿ. ತಮ್ಮ ಸಮಕ್ಷಮದಲ್ಲಿ ಇತರ ತಜ್ಞರನ್ನು ಬರಮಾಡಿಕೊಂಡು ತಾವು ವೈಯುಕ್ತಿಕವಾಗಿ ಪರೀಕ್ಷಿಸಿ ಮಾಡಿ ನೋಡಿ ನಿಜವಾಗಿಯೂ ಇದು ಬಹಳ ಉಪಯುಕ್ತವಾಗಿದೆಯೆಂದು ತಮಗೆ ಮನವರಿಕೆಯಾಯಿತೆಂದರೆ ಸದರಿ ಮೀಟರ್ ಅನ್ನು ಅಳವಡಿಸುವುದಕ್ಕೆ ವ್ಯವಸ್ಥೆ ಮಾಡಬಹುದು. ಬಿ.ಹೆಚ್.ಇ.ಎಲ್.ನವರು ತಯಾರಿಸಿರುವ ಮೀಟರ್‌ಗಳನ್ನು ಈಗ ಅಳವಡಿಸುತ್ತಿದ್ದೇವೆ ಎನ್ನುವುದಕ್ಕಿಂತ ಹೆಚ್ಚು ಮುಖ್ಯವಾಗಿ ಆ ಮೀಟರ್ ಬಗ್ಗೆ ತಾವು ತಮ್ಮ ಸ್ವಂತ ವಿವೇಚನೆಯಿಂದ ಪ್ರಾಮಾಣಿಕವಾದ ಒಂದು ತೀರ್ಮಾನಕ್ಕೆ ಬರಬೇಕು.

ಅಧ್ಯಕ್ಷರು:- ಆ ಮೀಟರ್‌ಗಳನ್ನು ಬಿ.ಹೆಚ್.ಇ.ಎಲ್.ನವರು ತಯಾರಿಸಿದ್ದು; ಸಿ.ಪಿ.ಆರ್.ಐ.ನವರು ಮತ್ತು ಟಾಟಾ ಇನ್ಫಿಟ್ಯೂಟ್‌ನವರು ಅವುಗಳನ್ನು ಸರ್ಟಿಫೈ ಮಾಡಿದ್ದಾರೆ. ಅವರಿಗೆ, ನನಗೆ ಮತ್ತು ನಿಮಗೆ ಮೀಟರ್ ಬಗ್ಗೆ ಏನು ಗೊತ್ತಾಗುತ್ತದೆ? ನಮ್ಮ ಮೀಟರ್ ಬೇರೆ!

ಶ್ರೀ ವಾಟಾಳ್ ನಾಗರಾಜ್:- ನಮ್ಮ ಮೀಟರ್ ಬೇರೆ ಅದು ಬೇರೆ ಇರಲಿ.

MR. SPEAKER:- I am very frank. ಈಗ ಸಭಾ ನಾಯಕರಿಗೆ ಒಂದು ವೇಳೆ ಅವಕಾಶ ಕೊಟ್ಟರೆ, Can you certify whether that meter is correct or not?

ಶ್ರೀ ವಾಟಾಳ್ ನಾಗರಾಜ್:- ಅವರಿಗೂ ಯಾವುದಾದರೊಂದು ವ್ಯವಸ್ಥೆ ಇರುತ್ತದೆ. ಈಗ ನನ್ನ ವಾದವನ್ನು ತಮ್ಮ ಮುಂದಿಡುತ್ತೇನೆ. ಅದು ಸರಿಯೆಂದಾದರೆ ಸರ್ಕಾರ ಗಣನೆಗೆ ತೆಗೆದುಕೊಳ್ಳಲಿ, ಇಲ್ಲದಿದ್ದಲ್ಲಿ ನನ್ನದೇನೂ ಅಭ್ಯಂತರವಿಲ್ಲ, ನಾನು ಹೇಳುವುದು ಹೇಳಿದ್ದೇನೆ, ನಾವು ತಮಗೆ ತಿಳಿಸಿದ್ದೇವೆ. ನಮ್ಮ ಸಲಹೆ ಗಮನಿಸಿ ನಮ್ಮ ಕೈಯಲ್ಲಿ ಮೀಟರನ್ನು ಪರೀಕ್ಷಿಸಲು ನಮಗೆ ಶಕ್ತಿಯಿಲ್ಲವೆಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ.ಹೆಚ್. ಪಟೇಲ್:- ನನಗೆ ಕಿಲೋಮೀಟರ್ ಗೊತ್ತಾಗುತ್ತದೆಯೇ ಹೊರತು ಈ ಎಲೆಕ್ಟ್ರಾನಿಕ್ ಮೀಟರ್ ಗೊತ್ತಾಗುವುದಿಲ್ಲ. ಅದರ ತಂತ್ರಜ್ಞತೆಯೇ ಬೇರೆಯಾಗಿದೆ. ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯಂತೆ ಮೀಟರ್ ಸರಿಯಾಗಿ ಕಾರ್ಯ ನಿರ್ವಹಿಸುತ್ತದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸಿ ಎಂದು. ಅದಕ್ಕೆ ನಾನು ಫೇಸ್ಡ್ ಮ್ಯಾನರ್‌ನಲ್ಲಿ ಹಮ್ಮಿಕೊಳ್ಳುತ್ತೇವೆಂದು ಹೇಳಿದೆ. ಮೀಟರ್‌ಗಳನ್ನು ತರಿಸಿದ್ದು ಅವುಗಳನ್ನು ಕೆಲವು ಕಡೆ ಅಳವಡಿಸಿ ಪರೀಕ್ಷಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ನಾವೇನು ಬೇಡಿಕೆಯಿಟ್ಟಿದ್ದೆವು, ಅಷ್ಟನ್ನೂ ಅವರು ಒಪ್ಪಿದ್ದಾರೆಂದಲ್ಲ. ನಾವು ಅರೆ ಮನಸ್ಸಿನಿಂದ ಇದರ ಬಗ್ಗೆ ಹೊಂದಾಣಿಕೆಯಾಗಬೇಕಿಲ್ಲಾ. ನಾವು ಹೇಳಿದ್ದೆಲ್ಲವೂ ಸಹ ಒಂದು ಹಂತದಲ್ಲಿ ಮಧ್ಯಾಹ್ನ ಸುಮಾರು ಹನ್ನೆರಡು ಗಂಟೆಗೂ ಹಿಂದೆಯೇ ಒಪ್ಪಿಗೆಯಾಗುತ್ತದೆಂಬ ಒಂದು ಚಿತ್ರಣವಿತ್ತು, ಅದು ಆಗಿಲ್ಲ. ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ರೀತ್ಯ ಮುಖ್ಯಮಂತ್ರಿಗಳನ್ನು ತಮ್ಮ ಗುಂಪಿಗೆ ನಾವು ಕರೆದುಕೊಂಡು ಬಂದಿದ್ದರೆ ತಕ್ಷಣವೇ ನಮ್ಮ ಬೇಡಿಕೆ ಒಪ್ಪಿಗೆಯಾಗುತ್ತಿತ್ತು. ಆದರೆ, ಪಕ್ಕದ ರೂಮಿಗೆ ಹೋದ ನಂತರ ತಕ್ಷಣವೇ ಆ ಒಪ್ಪಿಗೆಯಲ್ಲಿ ಬದಲಾವಣೆಯಾಯಿತು. ಇದು ಬದಲಾವಣೆಯಾಗಿ ಈ ಹಂತಕ್ಕೆ ತಲುಪಿದ್ದು ಚಿಂತೆಯಿಲ್ಲ. ಆದರೂ ಅರ್ಧಂಬರ್ಧ ಮನಸ್ಸಿನಲ್ಲಿ ತಾವು ಒಂದು ನಿರ್ಧಾರಕ್ಕೆ ಬಂದಿರುವುದನ್ನು ನಾವು ಮೆಚ್ಚುತ್ತೇವೆಂದು ಅತ್ಯಂತ ಪ್ರಾಮಾಣಿಕವಾಗಿ ನಾವು ಹೇಳುತ್ತಿದ್ದೇವೆ. ಬೇರೆ ವಿಧಿನೇ ಇಲ್ಲ ಈಗ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮುಂದೆ ತಾವು ಯಾವುದೇ ರೀತಿಯ ನೆಗೋಷಿಯೇಷನ್‌ಗೆ ಕರೆದರೆ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರನ್ನು ಹೊರತುಪಡಿಸಿ ನೀವು ಕರೆದರೆ ಸ್ವಲ್ಪ ಸರಿಹೋಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರಿಗೆ ಸ್ವಲ್ಪ ಇರುಸು-ಮುರುಸು ಉಂಟಾದಲ್ಲಿ ನಾವು-ನೀವೂ ಸ್ವಲ್ಪ ಒಟ್ಟಿಗೆ ಮಾತನಾಡಿಕೊಂಡು ಹೋಗೋಣ.

+ ಶ್ರೀ ಹೆಚ್.ಎನ್. ನಂಜೇಗೌಡ (ಬಸವನ ಗುಡಿ):- ಮಾನ್ಯ ಅಧ್ಯಕ್ಷರೆ, ಕೊನೆಗೂ ಇದೊಂದು ಹಂತ ತಲುಪಿದೆ. ಅವರಿಗೂ ಅಷ್ಟೊಂದು ಸಮಾಧಾನ ಇಲ್ಲ ನಮಗೂ ಅಷ್ಟೊಂದು ಸಮಾಧಾನ ಇಲ್ಲದಂತಾಗಿದೆ. ನನಗೆ ಬೆಳಿಗ್ಗೆ ಒಂದು ವಿಷಯ ಏನು ಅರ್ಥವಾಯಿತೆಂದರೆ, ಮಾನ್ಯ ಜೆ.ಹೆಚ್. ಪಟೇಲ್‌ರವರಿಗೆ ಗೊತ್ತಿರುವಂತೆ ನೀರು ಕಾಯಿಸುವುದಕ್ಕೆ ನಮ್ಮ ಮನೆಯಲ್ಲಿ ಸೋಲಾರ್ ಉಪಕರಣವನ್ನು ಅಳವಡಿಸಿದ್ದಾರೆ. ಸಾಮಾನ್ಯವಾಗಿ ಸೋಲಾರ್ ಉಪಕರಣವನ್ನು ಇನ್‌ಸ್ಟಾಲ್ ಮಾಡಿದ ನಂತರ ಎಷ್ಟೋ ತಿಂಗಳುಗಳಾದ ಬಳಿಕ ನಾವು ದುಡ್ಡು ಕೊಡುತ್ತೇವೆ. ಆದರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ತಮ್ಮ ಆದಾಯವನ್ನು ಹೆಚ್ಚು ಮಾಡಿಕೊಳ್ಳಬೇಕೆಂಬ ದೃಷ್ಟಿಯಿಂದ ಹಣವನ್ನು ಮುಂಗಡವಾಗಿ ತೆಗೆದುಕೊಳ್ಳುವುದು. ಇನ್ನೂ ಹತ್ತು ವರ್ಷಗಳಿಗೆ ಆಗುವುದಿದ್ದರೆ ಇವೊತ್ತೇ ಠೇವಣಿಯಾಗಿ ತೆಗೆದುಕೊಳ್ಳುವುದು. ನಾವು ಅದನ್ನು ಪಾಯಿಂಟ್ ಔಟ್ ಮಾಡಿದ ತಕ್ಷಣ ಮುಖ್ಯಮಂತ್ರಿಗಳಿಗೆ ಅರ್ಥವಾಯಿತು. ಏನೆಂದರೆ, ಇನ್‌ಸ್ಟಾಲ್ ಮಾಡಿದ ನಂತರವೇ ಹಣವನ್ನು

ಸಂಗ್ರಹಿಸುವುದು ಸೂಕ್ತವೆನ್ನುವುದು ಅವರ ಮನಸ್ಸಿಗೆ ಬಂತು. ಇನ್ನೊಂದು ಯಾವ ವಿಚಾರವನ್ನು ನಾನು ತಿಳಿಸಲು ಇಚ್ಛೆಪಡುತ್ತೇನೆಂದರೆ, ಸರ್ವ ವಿದ್ಯುತ್ ಗೃಹದ ಸಂಪರ್ಕಕ್ಕಾಗಿ ಮೀಟರ್‌ಗಳನ್ನು ಅಳವಡಿಸಲು ರೂ. 1,300.00 ಗಳನ್ನು ತಾವು ಏನು ನಿಗದಿಪಡಿಸಿದ್ದೀರಿ, ಈ ಮೀಟರ್ ರೂ. 600-700 ಗಳಿಗೆ ಲಭ್ಯವಾಗುತ್ತದೆ, ಅದನ್ನು ಸರಬರಾಜು ಮಾಡುವವರಿದ್ದಾರೆನ್ನುವುದು ನಮಗೆ ತಿಳಿದು ಬಂದಿದೆ. ಈ ದಿಸೆಯಲ್ಲಿ ಮೀಟರ್ ಅಳವಡಿಸತಕ್ಕಂಥ ಕಾಲದಲ್ಲಿ ಅಥವಾ ಆರ್ಡರ್ ಕೊಡತಕ್ಕಂಥ ಕಾಲದಲ್ಲಿ ಕೊಟೇಶನ್ ಕರೆದು ಕೆ.ಇ.ಬಿ.ಯವರಿಗೆ ಹಣ ಉಳಿತಾಯ ಮಾಡಬೇಕು. ಇದನ್ನು ಅಧಿಕಾರಿಗಳಿಗೆ ವಹಿಸಿದರೆ ಸರಿಯಾಗುವುದಿಲ್ಲವೆಂದು ನಾನು ಹೇಳುತ್ತೇನೆ. ವ್ಯವಹಾರಗಳ ಬಗ್ಗೆ ಅಧಿಕಾರಿಗಳ ಮಟ್ಟದಲ್ಲಿ ಅವರು ಇಷ್ಟಬಂದಂತೆ ಮಾಡಲು ಬಿಟ್ಟರೆ ಅದು ಸರಿಯಾಗುವುದಿಲ್ಲ. ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಸರ್ಕಾರದವರು ಫ್ಲಾಟ್ ರೇಟಾಗಿ ರೂ. 5,000.00 ಮತ್ತು 2,500.00 ಏನು ಹಾಕಿದ್ದರು, ಇದನ್ನು ರೂ. 1,000 ಮಾಡಬೇಕಾಗಿತ್ತೆಂದು ಹಿರಿಯ ಸದಸ್ಯರಾದ ವೈ. ರಾಮಕೃಷ್ಣರವರು ಜಗಳ ಮಾಡಿದರು. ಇದು ಆಗುವುದಿಲ್ಲವೆಂದು ನಾವು ಹೇಳಿದ್ದೆವು. ಇದರಲ್ಲಿ ತಾವು ಒಂದು ಸೂಚನೆ ಕೊಟ್ಟರಿ. ಏನೆಂದರೆ, ರೈತರು ಅನಧಿಕೃತವಾಗಿ ವಿದ್ಯುತ್ ಸಂಪರ್ಕವನ್ನು ಹೇಗೆ ತೆಗೆದುಕೊಳ್ಳುವುದಕ್ಕಾಗುತ್ತದೆ? ಕಂಬ ಎಲ್ಲಿಂದ ತರುತ್ತಾರೆ? ವೈರ್ ಅನ್ನು ಎಲ್ಲಿಂದ ತರುತ್ತಾರೆ? ಇವೆಲ್ಲವನ್ನೂ ನಿಮ್ಮ ಅಧಿಕಾರಿಗಳೇ ಸರಬರಾಜು ಮಾಡುವುದು. ಅನಧಿಕೃತವಾಗಿ ವಿದ್ಯುತ್ ಸಂಪರ್ಕವನ್ನು ಯಾವ ರೈತರು ತೆಗೆದುಕೊಂಡಿರುತ್ತಾರೋ ಅವರಿಗೆ ಜಾಸ್ತಿ ಹಣ ಖರ್ಚಾಗಿರುತ್ತದೆ, ಏಕೆಂದರೆ, ಅವರು ಲಂಚಕೊಡಬೇಕಲ್ಲಾ. ಇದರಲ್ಲಿ ನೀವು ಹೇಳಿದ ಒಂದು ಮಾತನ್ನು ಒಪ್ಪುತ್ತೇನೆ. ಈ ಸದನದಲ್ಲಿ ನಮ್ಮ ಸದಸ್ಯ ಸ್ನೇಹಿತರುಗಳು ಯಾರಿದ್ದಾರೋ, ಈ ವಿಚಾರದಲ್ಲಿ ಸರ್ಕಾರ ಯಾರಾದರೂ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಾಗ ಅವರ ಪರವಾಗಿ ಒಬ್ಬರೂ ಹೋಗತಕ್ಕದ್ದಲ್ಲ. ಇದರ ಬಗ್ಗೆ ನಾವು ಶಪಥ ಮಾಡಬೇಕು. ಈಗ ರೈತರೂ ಪಾಲುದಾರರು; ವಿದ್ಯುತ್ತನ್ನು ಕದಿಯುತ್ತಾರೆ, ರೈತ ಕದ್ದ ಪದಾರ್ಥ ತೆಗೆದುಕೊಂಡಿದ್ದಾನೆ; ಕದ್ದು ಕೊಡುವವರ್ಯಾರು? ಮಾರುವವರ್ಯಾರು ಎಂದರೆ ಈ ಅಧಿಕಾರಿಗಳು. ಕೆಳವರ್ಗದ ಕೆ.ಇ.ಬಿ. ನೌಕರರು ಇದನ್ನು ಮಾಡುತ್ತಾರೆ. ಆದುದರಿಂದ, ಇದು ತಪ್ಪಬೇಕಾದರೆ, ಮುಂದೆ ಪುನರಾವರ್ತನೆ ಆಗದಿರಬೇಕಾದರೆ ಕೊನೆಯ ಪಕ್ಷ 200-300 ಜನರ ಮೇಲಾದರೂ ನೀವು ಈ ಕುರಿತು ಕ್ರಮ ತೆಗೆದುಕೊಂಡು ಅವರನ್ನು ಕೆಲಸದಿಂದ ಅಮಾನತ್ತುಗೊಳಿಸುತ್ತೀರೋ? ವಜಾಗೊಳಿಸುತ್ತೀರೋ? ಖಚಿತವಾದ ಏನಾದರೂ ಕಾರ್ಯಕ್ರಮವನ್ನು ನೀವು ಹಮ್ಮಿಕೊಳ್ಳಬೇಕೆಂದು ನಾವು ವಿನಂತಿಸಿಕೊಳ್ಳುತ್ತಾ ನಂತರ ಮೆಟಲ್ ಬಾಕ್ಸ್ ವಿಚಾರದಲ್ಲಿ ಹಣ ಸಂಗ್ರಹಿಸುವುದಿಲ್ಲವೆಂದು ಒಪ್ಪಿಕೊಂಡಿದ್ದೀರಿ, ಅದರ ಬಗ್ಗೆ ಸದನದಲ್ಲಿ ತಾವು ಘೋಷಿಸಲಿಲ್ಲ. ಆ ಮೆಟಲ್ ಬಾಕ್ಸ್‌ನ ಅವಶ್ಯಕತೆಯಿಲ್ಲ. ಮನೆಯೊಳಗೆ ಮೀಟರ್ ಇದ್ದರೆ ಅದಕ್ಕೆ ಮೆಟಲ್ ಬಾಕ್ಸ್ ಏಕೆ ಬೇಕು? ಸಂಪನ್ಮೂಲ ಹೇಗೆ ಕ್ರೋಢೀಕರಿಸಿಕೊಳ್ಳಬೇಕೆಂಬುದಷ್ಟೇ ಉದ್ದೇಶವಿಟ್ಟುಕೊಳ್ಳಬಾರದು. ಇವೆಲ್ಲಾ ಸೇವಾ ಸಂಸ್ಥೆಗಳು. ಒಂದು ದುಃಖವಾಗತಕ್ಕಂಥ ಸಂಗತಿಯೇನೆಂದರೆ, ಕೆ.ಇ.ಬಿ. ಆಗಲೀ, ಕೆ.ಎಸ್.ಆರ್.ಟಿ.ಸಿ. ಆಗಲೀ they are taking the people for a ride. ಅಲ್ಲಿನ ನೌಕರರು ಯಾರಿದ್ದಾರೋ ಆರ್ಗನೈಸ್ಡ್ ಸೆಕ್ಟರ್ ಎಂದು ಹೇಳಿ ಅವರ ಕ್ಷೇಮಕ್ಕಾಗಿ ಇದು ಇದೆಯೇ ಹೊರತು ಜನರ ಸೇವೆ

ಮಾಡುವುದಕ್ಕಲ್ಲ! ಉದ್ದೇಶ ತಿರುಗು ಮರುಗು ಆಗಿದೆ. ಇವು ಸೇವಾ ಸಂಸ್ಥೆಗಳಾಗದೇ ಜನರೇ (ನೌಕರರ) ತೀಟೆಗೆ ಇದನ್ನು ಮಾಡಿದಂತಾಗಿದೆ. ಇದು ತಿರುಗು-ಮರುಗಾಗಬೇಕು. ಇದಕ್ಕೋಸ್ಕರ ಏನಾದರೂ ಕಾನೂನು ತರಬೇಕು. ಏಕೆಂದರೆ, ಅವರು ಒಂದು ತರಹ ಬ್ಲಾಕ್‌ಮೇಲ್ ಶುರು ಮಾಡ್ತುರೆ. ಆರ್ಗನೈಸ್ಡ್ ಸೆಕ್ಟರ್‌ವೆಂದು ಸಾರ್ವಜನಿಕರನ್ನು, ಸರ್ಕಾರವನ್ನು ಹೆದರಿಸುವುದು, ತಮಗಿಷ್ಟ ಬಂದಂತೆ ವರ್ತಿಸುತ್ತಾರೆ. ಬಸ್ ಚಾಲಕರನ್ನು ಯಾವುದೋ ಹಳ್ಳಿಗೆ ಪೋಸ್ಟ್ ಮಾಡಿದರೆ, ಅವರು ಅಲ್ಲಿಗೆ ಹೋಗಲು ಇಷ್ಟವಿಲ್ಲವೆಂದರೆ ಹೊಡೆಯುವುದಕ್ಕೆ ಬರುತ್ತಾರೆ. ಎಂದು ಹೇಳುತ್ತಾರೆ? ಮನಸ್ವೇಚ್ಛೆ ನಡೆದುಕೊಳ್ಳುತ್ತಾರೆ. ಕೆ.ಇ.ಬಿ.ಯಲ್ಲಿರುವ ಲೈನ್‌ಮೆನ್ ಸಹ ಹಾಗೆಯೇ ಮಾಡುತ್ತಾರಾದ್ದರಿಂದ ಇದರ ಬಗ್ಗೆ ನೀವು ಸ್ವಲ್ಪ ತಲೆ ಕೆಡಿಸಿಕೊಂಡು ಸರಿಪಡಿಸಬೇಕು. ಇದರ ಬಗ್ಗೆ ಮಂತ್ರಿಗಳು ಮೊದಲು ಗಂಭೀರತೆಯಿಂದಿರಬೇಕು, ಇಲ್ಲದಿದ್ದರೆ, ಏನಾಗುತ್ತದೆಂದರೆ, ನಾನು ಬಹುತೇಕ ಗಮನಿಸುತ್ತಿದ್ದೇನೆ. ಏನೆಂದರೆ, ನಿಮ್ಮ ಅಧಿಕಾರಿಗಳು ಹೇಳಿದ್ದೇ ತೀರ್ಮಾನವಾಯಿತೇ ಹೊರತು ಮಂತ್ರಿಗಳು ಹೇಳಿದ್ದುದು ತೀರ್ಮಾನವಾಗುತ್ತಿಲ್ಲ. ಇದು ಹೀಗೆ ಆಗತಕ್ಕಂಥಾದ್ದಲ್ಲ. ಆದುದರಿಂದ, ತಾವು ಗಂಭೀರವಾಗಿ ಆಲೋಚಿಸಿ ಈ ವಿಚಾರವನ್ನು ಮನಸ್ಸಿಗೆ ತಂದುಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕು. ಅಂತೂ ಮುಖ್ಯಮಂತ್ರಿಗಳು ಸಹನೆಯಿಂದ ಸಹಕಾರ ಕೊಟ್ಟರು. ಅವರ ಅಧಿಕಾರಿಗಳು ಇಲ್ಲದಿದ್ದಲ್ಲಿ ದರವನ್ನು ಒಂದು ಸಾವಿರ ರೂಪಾಯಿಗಳಿಗೆ ನಿಲ್ಲಿಸುತ್ತಿದ್ದರು, ಆದರೆ, ಅದು ಆಗಲಿಲ್ಲ. ಅಂತೂ ವಿಷಯ ಕೊನೆಗೆ ಒಂದು ರೀತಿ ಇತ್ಯರ್ಥವಾದದ್ದು ನಮಗೂ ಸಮಾಧಾನವಾಯಿತು. ಇಷ್ಟು ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ಅಭಿನಂದನೆ ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂಥ ಸಮಸ್ಯೆಯ ಬಗ್ಗೆ ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಸರ್ಕಾರದ ಮೇಲೆ ಒತ್ತಡವನ್ನು ತಂದು, ತಮ್ಮ ಕಾನೂನನ್ನು ಬದಲಾವಣೆ ಮಾಡಬೇಕೆಂದು ಹೇಳಿ. ಹಲವಾರು ಬೇಡಿಕೆಗಳನ್ನು ನಾವು ಇಟ್ಟಿದ್ದೆವು. ಅದರಲ್ಲಿ ಬಹುತೇಕ ಬೇಡಿಕೆಗಳನ್ನು ಮಾನ್ಯ ಮುಖ್ಯಮಂತ್ರಿಯವರು ಧಾರಾಳವಾಗಿ ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ಅವರಿಗೆ ನಾವು ಅಭಿನಂದನೆಯನ್ನು ಸಲ್ಲಿಸಲೇ ಬೇಕು? ಹಿರಿಯ ಸದಸ್ಯರಾದ ಮಾನ್ಯ ನಂಜೇಗೌಡರು ಅದನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ, ಆ ಒಂದು ವಿಷಯವನ್ನು ಮಾತ್ರ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ, ವಿದ್ಯುಚ್ಛಕ್ತಿ ಕಳ್ಳತನವಾಗಲು ಪ್ರಮುಖ ಕಾರಣವಾಗಿರತಕ್ಕ ಅಧಿಕಾರಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು, ಅದರ ಬಗ್ಗೆ ಮುಖ್ಯಮಂತ್ರಿಯವರು ಈ ಸದನದಲ್ಲಿ ನಮಗೆ ಭರವಸೆಯನ್ನು ಕೊಡಬೇಕು. ಬೇರೆ ವಿಚಾರಗಳಿಗೆ ಹೋಗುವುದಿಲ್ಲ, ಯಾರು ಅನಧಿಕೃತವಾಗಿ ವಿದ್ಯುತ್‌ನ್ನು ಬಳುಸುತ್ತಿದ್ದಾರೆ, ಕಳ್ಳತನ ಮಾಡುತ್ತಿದ್ದಾರೆ ಅದಕ್ಕೆ ಪ್ರಮುಖವಾಗಿ ನೂರಕ್ಕೆ ತೊಂಭತ್ತೊಂಭತ್ತು ಭಾಗ ಅಧಿಕಾರಿಗಳೇ ಕಾರಣ. ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಲೇ ಬೇಕು. ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಸದನದಲ್ಲಿ ಹೇಳಬೇಕು. ಆ ರೀತಿ ಅವರಿಗೆ ಶಿಕ್ಷೆ ಕೊಡತಕ್ಕ ಸಂದರ್ಭದಲ್ಲಿ ನಾವುಗಳ್ಯಾರೂ ಮಧ್ಯ ಪ್ರವೇಶ ಮಾಡುವುದಿಲ್ಲವೆಂದು ನಮ್ಮ ಹಿರಿಯ ಸದಸ್ಯರು ನಮ್ಮೆಲ್ಲರ ಪರವಾಗಿ ಆಶ್ವಾಸನೆ ಕೊಟ್ಟಿದ್ದಾರೆ.

ನಾವೆಲ್ಲರೂ ಸಹ ಆ ಆಶ್ವಾಸನೆಗೆ ಬದ್ಧರಾಗಿರುತ್ತೇವೆ. ಆದರೆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಸದನದಲ್ಲಿ ತಾವು ಹೇಳಬೇಕು. ಆ ರೀತಿ ಕ್ರಮ ತೆಗೆದುಕೊಂಡರೆ ನಾಳೆ ದಿವಸ ಕೆ.ಇ.ಬಿ. ಯಲ್ಲಿ ನಡೆಯುತ್ತಿರುವ ಬಹುತೇಕ ಅವ್ಯವಹಾರಗಳು ನಿಂತುಹೋಗುತ್ತವೆ ರೈತರಿಗೂ ತೊಂದರೆಯಾಗುವುದಿಲ್ಲ, ಅಧಿಕಾರಿಗಳಿಗೂ ಬುದ್ಧಿ ಬರುತ್ತದೆ. ಬೇರೆ ಇಲಾಖೆಯಲ್ಲಿರುವ ಅಧಿಕಾರಿಗಳಿಗೂ ಎಚ್ಚರಿಕೆಯಾಗುತ್ತದೆ. ಆದ್ದರಿಂದ ಅಧಿಕಾರಿಗಳ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ತಾವು ಇಲ್ಲಿ ಹೇಳಬೇಕೆಂದು ಒತ್ತಾಯಿಸಿ ತಮಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು):-** ಮಾನ್ಯ ಅಧ್ಯಕ್ಷರೆ, ಕೆ.ಇ.ಬಿ. ಪ್ರಕಟಣೆ ಮಾಡಿರುವ ಕೆಲವು ಕ್ರಮಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಪಕ್ಷದ ನಾಯಕರು ಹೇಳಿದಂತೆ ತಿದ್ದುಪಡಿ ಮಾಡಿ ಸರ್ಕಾರ ಒಪ್ಪಿಕೊಂಡಿದೆ. ಕಾರಣ ಅವರುಗಳ ವಾದದಲ್ಲಿ ಕೆಲವು ಭಾಗವನ್ನು ಒಪ್ಪಿಕೊಳ್ಳತಕ್ಕದ್ದು ಇದೆ. ಅವರುಗಳೇನೋ ಹೇಳಿದ್ದಾರೆ ನಾನು ಅದನ್ನು ಒಪ್ಪಿಕೊಳ್ಳುವುದಿಲ್ಲವೆನ್ನತಕ್ಕ ಆ್ಯಟಿಟ್ಯೂಡ್ ಈ ಸರ್ಕಾರಕ್ಕೆ ಇಲ್ಲ ಎಲ್ಲಿಯಾದರೂ ಸರಿಯಾದ ಸಲಹೆ ಬಂದರೆ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ವರ್ಕ್ ಆರ್ಡರ್ ಆಗಿದೆ, ಸ್ಯಾಂಕ್ಷನ್ ಆಗಿದೆ, ಐದಾರು ಕಂಬಗಳನ್ನು ಕೊಟ್ಟಿದ್ದಾರೆ; ಇಂತ ಸಂದರ್ಭದಲ್ಲಿ ಅದು ಅನಧಿಕೃತವೆಂದು ನಾನೂ ಸಹ ಕರೆಯುವುದಕ್ಕೆ, ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ವಿರೋಧ ಪಕ್ಷದವರು ಹೇಳಿದ್ದನ್ನು ಒಪ್ಪಿಕೊಂಡಿದ್ದೇನೆ. ಅಧುನಿಕ ತಂತ್ರಜ್ಞಾನ ಎಷ್ಟು ವೇಗವಾಗಿ ಅಭಿವೃದ್ಧಿಯಾಗುತ್ತಿದೆಯೆಂದರೆ ಈಗ ಏನು ಎಲೆಕ್ಟ್ರಾನಿಕ್ ಮೀಟರ್ ಬಂದಿದೆ It may be opsolute in another 4-5 years. ನಾವು ಕ್ಯಾಲಿಕ್ಯುಲೇಟರ್‌ಗಳು ಮೊದಲು ಬಂದಾಗ ಐದುನೂರು, ಸಾವಿರವರೆಗೆ ಕೊಡುತ್ತಿದ್ದೆವು. ಆದರೆ ಅವುಗಳು ಇಂದು ಐವತ್ತು, ನೂರು ರೂಪಾಯಿಗಳಿಗೆಲ್ಲಾ ಸಿಗುತ್ತಿದೆ.- costwise, technologically, we don't know the speek with which it is growing. These meters may become obsolete. ಅದಕೋಸ್ಕರ ತಂತ್ರಜ್ಞರು ಇದನ್ನು ಮೊದಲೇ ಪರೀಕ್ಷೆ ಮಾಡಿದ್ದಾರೆ. ಇನ್ನೂರು ಯೂನಿಟ್‌ನ್ನು ಉಪಯೋಗ ಮಾಡಬೇಕು ಎನ್ನುವವನು ಮುನ್ನೂರು ಯೂನಿಟ್ ಅಥವಾ ಮೂನ್ನೂರ ಎಂಟು ಯೂನಿಟ್ ಉಪಯೋಗಿಸುತ್ತಿದ್ದುದ್ದನ್ನು ಹಳೆಯ ಮೀಟರ್‌ಗಳು ಸರಿಯಾಗಿ ಡಿಟೆಕ್ಟ್ ಮಾಡಲು ಸಾಧ್ಯವಿರಲಿಲ್ಲ, ಅದು ಎಲೆಕ್ಟ್ರೋ ಮೆಕ್ಯಾನಿಕಲ್ ಮೀಟರ್‌ಗಳು ಮತ್ತು ಅವುಗಳನ್ನು ಟ್ಯಾಂಪರ್ ಮಾಡಲು ಸಾಧ್ಯತೆ ಇತ್ತು. ಆದರೆ ಈಗಿನ ಎಲಾಕ್ಟ್ರಾನಿಕ್ ಮೀಟರ್‌ಗಳು ಟ್ಯಾಂಪರ್ ಪ್ರೂಫ್: ಇದನ್ನು ಎಲ್ಲರೂ ಸಹ ಒಪ್ಪಿಕೊಂಡಿದ್ದಾರೆ. ರೈತರಿಗೆ ಯಾವುದೇ ರೀತಿಯಿಂದ ಕಿರುಕುಳವಾಗಬಾರದು. ಯಾರು ವಿದ್ಯುತ್‌ನ್ನು ಕದಿಯುತ್ತಿದ್ದಾರೆ ಅದನ್ನು ಪತ್ತೆ ಮಾಡಬೇಕು. ಅವರು ಯಾವುದೇ ವರ್ಗದವರಿರಲಿ ಕಾನೂನಿನ ರೀತಿ ಸಮಾನ ದೃಷ್ಟಿಯಿಂದ ನೋಡಬೇಕು. ಇದು ನಮ್ಮ ಮುಖ್ಯ ಉದ್ದೇಶ. ಅದೆ ರೀತಿ ಪಂಪುಸೆಟ್‌ನ ಬಗ್ಗೆ ಹೇಳುವುದಾದರೆ, ರೈತರು ಇಂತಿಷ್ಟೇ ವಿದ್ಯುತ್‌ನ್ನು ಉಪಯೋಗಿಸುತ್ತಾರೆಂದು ನಿಖರವಾಗಿ ಇದರಿಂದ ಹೇಳಬಹುದು. ಆ ರೀತಿ ನಿಖರವಾಗಿ ಹೇಳಿ ನೀವು ಪವರ್ ಉಪಯೋಗಿಸುತ್ತೀರಿ ಇಷ್ಟು ಹಣವನ್ನು ಕೊಡಿ ಎಂದು

ಕೇಳಬಹುದು. ಆದರೆ ಈಗ ಆ ರೀತಿ ಸರಿಯಾಗಿ ನಮ್ಮ ಹತ್ತಿರ ಲೆಕ್ಕವಿಲ್ಲದಿರುವುದರಿಂದ ಅದರ ಬಗ್ಗೆ ಅಂದಾಜಿನಿಂದ ಹೇಳುವುದು ಬೇಡ. ಆದ್ದರಿಂದ ಈ ಕ್ರಮ ಅವಶ್ಯಕವಾಗಿದೆ. ಆನಂತರ ಕೆ.ಇ.ಬಿ.ನವರು ಮಾಡಿದ್ದೆಲ್ಲಾ ಏನೋ ಅಪರಾಧವೆನ್ನುವಂತೆ ದಯವಿಟ್ಟು ತಿಳಿದುಕೊಳ್ಳಬಾರದು. ಕೆ.ಇ.ಬಿ.ನೌಕರರ ಯೂನಿಯನ್ ಸ್ಥಾಪಕರಲ್ಲಿ ನಾನೂ ಒಬ್ಬ. ಅದರಲ್ಲಿ ತಪ್ಪು ಇರಬಹುದು. ಎಲ್ಲರೂ ತಪ್ಪು ಮಾಡದೆ ಸತ್ಯವಂತರೆಂದು ನಾನು ಹೇಳುವುದಿಲ್ಲ. ಕೆಲವು ನೌಕರರನ್ನು ಈ ಕೆಲಸದಲ್ಲಿ ಉಪಯೋಗ ಮಾಡಿಕೊಳ್ಳುತ್ತಿರಬಹುದು. ಸ್ಪ್ಯಾನರ್‌ನ್ನು ಯಾರು ಉಪಯೋಗಿಸುತ್ತಾರೆಂದರೆ ಬೋಲ್ಟ್‌ನ್ನು ತೆಗೆದು ಕಳ್ಳತನ ಮಾಡಬೇಕು ಎಂಬುವವನು ಮಾತ್ರ ಸ್ಪ್ಯಾನರ್‌ನ್ನು ಉಪಯೋಗಿಸುತ್ತಾನೆ. ಇಲ್ಲ ಕೆ.ಇ.ಬಿ. ನಲ್ಲಿರುವವರು ಈ ರೀತಿ ಕಳ್ಳತನ ಮಾಡಬಹುದು, ಆ ರೀತಿ ಕಳ್ಳತನ ಮಾಡಬಹುದು ಎಂದು ಹೇಳುವವರು ಇರುತ್ತಾರೆ. ಆದ್ದರಿಂದ ಕೆ.ಇ.ಬಿ. ಎಂದ ತಕ್ಷಣ ಏನೋ ಒಂದು ದುಷ್ಟರ ಕೂಟವೆಂದು ಭಾವಿಸುವುದು ಸರಿಯಲ್ಲ. ಪಾಪ ಕೆ.ಇ.ಬಿ. ನೌಕರರ ಸೇವೆ, ಅವರು ಹೋಗತಕ್ಕ ದಾರಿ, ಕಾಡು, ಅವರು ಅನುಭವಿಸತಕ್ಕ ಕಷ್ಟ ಬಹಳವಾದುದು. ಕೆಲವರು ಮಿಸ್‌ಚಿವಸ್ ಇರಬಹುದು. ಹಾಗೆಂದು ಇಡೀ ಕೆ.ಇ.ಬಿ.ಯ ಮೆಲೆ ಕೋಪ ಮಾಡಿಕೊಳ್ಳುವುದು ಬೇಡ. ಮಾನ್ಯ ಶ್ರೀರಾಮರೆಡ್ಡಿಯವರಿಗೆ ಹೇಳುವುದೆನೆಂದರೆ, ಸದನದಲ್ಲಿ ಒಂದು ತೀರ್ಮಾನವಾಗಿದೆ, ಕೆ.ಇ.ಬಿ.ಯಲ್ಲಿ ಯಾರು ಅಪರಾಧವನ್ನು ಮಾಡುತ್ತಾರೆ ಅಂಥವರ ಮೇಲೆ ಏನು ಎವಿಡೆನ್ಸ್ ಬರುತ್ತದೆ, ಅಂಥವರ ಮೇಲೆ ನಾವೇನಾದರೂ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡರೆ ಯಾರೂ ಮಧ್ಯ ಪ್ರವೇಶ ಮಾಡಬಾರದು. ಮಾನ್ಯ ಅಧ್ಯಕ್ಷರು ಆ ರೀತಿ ಸಲಹೆ ಮಾಡಿದ್ದಾರೆ. ಆ ರೀತಿ ಯಾರಾದರೂ ಮಧ್ಯ ಪ್ರವೇಶ ಮಾಡಿದರೆ ನಾನು ಅಧ್ಯಕ್ಷರಿಗೆ ತಿಳಿಸುತ್ತೇನೆ; ಇದು ಪ್ರಜಾಪ್ರಭುತ್ವ ಪದ್ದತಿ, ವಿಷಯಗಳನ್ನು ಪರಸ್ಪರ ಹಂಚಿಕೊಳ್ಳುವ ಮೂಲಕ ಪರಿಹಾರವನ್ನು ಕಂಡುಹಿಡಿದುಕೊಳ್ಳಬೇಕು, ಆದರೆ ಹಠ ಹಿಡಿದುಕೊಂಡು ಕುಳಿತು ನಾವು ಕೇಳುವುದೇ ಇಲ್ಲವೆಂದು ಮಾಡಲು ಹೋಗಬೇಡಿ. ಇದು ಸರ್ಕಾರದ ಮನವಿಯೆಂದು ತಮ್ಮಲ್ಲಿ ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಇವತ್ತು ಖಾಸಗಿ ಕಾರ್ಯಕಲಾಪಗಳ ದಿನ, ನಮ್ಮದೊಂದು ನಿರ್ಣಯವಿದೆ ಮತ್ತು ಪ್ರಶ್ನೋತ್ತರ ಇದೆ, ಅದಕ್ಕೆ ತಾವು ಅನುಮತಿ ಕೊಟ್ಟಿಲ್ಲ.

ಅಧ್ಯಕ್ಷರು:- ಪ್ರಶ್ನೋತ್ತರ ಇಲ್ಲ. ಆದರೆ ತಮ್ಮ ನಿರ್ಣಯಕ್ಕೆ ಈ ಸಮಯ ಸರಿಯಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಪಾನ ನಿರೋಧ ಜಾರಿಗೆ ತರುವ ಬಗ್ಗೆ ನಿರ್ಣಯವಿತ್ತು...

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ:- ಅ. ಸಿರಗುಪ್ಪದಲ್ಲಿ ಜೈನ ಸಮಾಜದವರ ಮೇಲೆ ಮೊಕದ್ದಮೆ.

ಅಧ್ಯಕ್ಷರು:- ಸನ್ಮಾನ್ಯ ಸಭಾನಾಯಕರಲ್ಲಿ ಒಂದು ವಿಚಾರವನ್ನು ಗಮನಕ್ಕೆ ತರಬೇಕಾಗಿತ್ತು. ಅದೇನೆಂದರೆ, ಸಿರಗುಪ್ಪದಲ್ಲಿ ದುರಾದೃಷ್ಟವಶಾತ್ ಎರಡು ಅಲ್ಪ ಸಂಖ್ಯಾತ ಕೋಮುಗಳ ಮಧ್ಯ ಸ್ವಲ್ಪ ಘರ್ಷಣೆಯಾಗಿದೆಯಂತೆ. ಜೈನ್ ಸಮಾಜಕ್ಕೆ ಸೇರಿದವರು ವಾಸವಿರುವುದೆ 70, 80 ಜನರು. ಇನ್ನೊಂದು ಅಲ್ಪಸಂಖ್ಯಾತ ಜನರು ಸ್ವಲ್ಪ ಹೆಚ್ಚಿಗೆ ಇದ್ದಾರೆ. ಆ ಜೈನ ಸಮಾಜದ ಸುಮಾರು ನಲವತ್ತು